ವಿಜಯಪುರ | ಸಂಪುಟ 04 | ಸಂಚಿಕೆ 061 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಗುರುವಾರ, ಏಪ್ರಿಲ್, 23, 2026

"ಕಬಡ್ಡಿ ಪಂದ್ಯದ ಸಮಯದಲ್ಲಿ ನಾನು ಆಕಸ್ಮಿಕವಾಗಿ ಬೆಟ್ಟಿಂಗ್ ಬಗ್ಗೆ ಹೇಳಿದ್ದೆ. ಹಳ್ಳಿಯಲ್ಲಿ ನಾವು ಕೆಲವೊಮ್ಮೆ ಸಾಂದರ್ಭಿಕವಾಗಿ ಮಾತನಾಡುತ್ತೇವೆ. ಖಂಡಿತ, ಕಾನೂನಿನ ದೃಷ್ಟಿಯಲ್ಲಿ ಅದು ತಪ್ಪು, ಆದರೆ ನಾನು ಅದನ್ನು ಯಾವ ಸಂದರ್ಭದಲ್ಲಿ ಹೇಳಿದ್ದೇನೆ ಎಂಬುದು ಮುಖ್ಯ."



■ ಜಿ.ಪರಮೇಶ್ವರ
ಗೃಹ ಸಚಿವರು

## ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಕೇಂದ್ರದಿಂದ ತನಿಖಾ ಸಂಸ್ಥೆಗಳ ಬಳಕೆ । ಕೇಂದ್ರ ಸರ್ಕಾರದ ವಿರುದ್ಧ ಸಿಎಂ ಸಿದ್ದರಾಮಯ್ಯ ತೀವ್ರ ವಾಗ್ದಾಳಿ

# ಇಡಿ ದಾಳಿಗಳಲ್ಲಿ ಪಕ್ಷಪಾತ: ಕಾಂಗ್ರೆಸ್ ನಾಯಕರೇ ಗುರಿ

ಮೈಸೂರು: ಕಾಂಗ್ರೆಸ್ ನಾಯಕರನ್ನೇ ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ (ಇಡಿ) ದಾಳಿಗಳನ್ನು ನಡೆಸುತ್ತಿದೆ ಎಂದು ಆರೋಪಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಗುಂಡ್ಲುಪೇಟೆ ಹೆಲಿಪ್ಯಾಡ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕ ಎನ್‌ಎ ಹ್ಯಾರಿಸ್ ಅವರ ಪುತ್ರರು ಮತ್ತು ಮಾಜಿ ಕೇಂದ್ರ ಸಚಿವ ರೆಹಮಾನ್ ಖಾನ್ ಅವರ ಮೊಮ್ಮಗನ ಮನೆಗಳ ಮೇಲೆ ನಡೆದ ಇಡಿ ದಾಳಿಗಳನ್ನು ಉಲ್ಲೇಖಿಸಿ, "ಇವು ಆಯ್ಕೆಮಾಡಿದ ಕ್ರಮಗಳಂತೆ ಕಾಣುತ್ತಿವೆ" ಎಂದು ಹೇಳಿದರು.



"ಕಾಂಗ್ರೆಸ್ ನಾಯಕರ ವಿರುದ್ಧ ಮಾತ್ರ ಇಂತಹ ದಾಳಿಗಳು ನಡೆಯುತ್ತಿವೆ. ಬಿಜೆಪಿ ನಾಯಕರ ವಿರುದ್ಧ ಇದೇ ರೀತಿಯ ಕ್ರಮಗಳು ಕಾಣುತ್ತಿಲ್ಲ. ಇದರಿಂದ ತನಿಖಾ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಅನುಮಾನ ಮೂಡುತ್ತದೆ," ಎಂದು ಸಿಎಂ ಟೀಕಿಸಿದರು.

ಇದನ್ನು ರಾಜಕೀಯ ಪ್ರೇರಿತ ಕ್ರಮ ಎಂದು ಪರೋಕ್ಷವಾಗಿ ಸೂಚಿಸಿದ ಅವರು, ಕೇಂದ್ರ ಸರ್ಕಾರ ತನ್ನ ವಿರೋಧ ಪಕ್ಷಗಳನ್ನು ಗುರಿಯಾಗಿಸಿ ತನಿಖಾ ಸಂಸ್ಥೆಗಳನ್ನು ಬಳಸುತ್ತಿದೆ ಎಂಬ ಆರೋಪವನ್ನು ಮಾಡಿದರು. ರಾಜ್ಯದ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡಿ, "ಈ ಯೋಜನೆಗಳನ್ನು ವಿರೋಧಿಸಿದ್ದವರೇ ಈಗ ಅದೇ ಮಾದರಿಯ ಯೋಜನೆಗಳನ್ನು ಘೋಷಿಸುತ್ತಿದ್ದಾರೆ. ಬಡವರ ಹಿತಕ್ಕಾಗಿ ಗ್ಯಾರಂಟಿ ಯೋಜನೆ ಅಗತ್ಯವೆಂದು ಅವರಿಗೂ ಈಗ ಅರಿವಾಗಿದೆ," ಎಂದರು. ಆಯ್ಕೆ ಮಾಡಿ ಪರಿಹಾರ ನೀಡಲಾಗುತ್ತಿದೆ ಎಂಬ ಜೆಡಿ-ಎಸ್ ಶಾಸಕರ ಆರೋಪಕ್ಕೆ ಪ್ರತಿಕ್ರಿಯಿಸಿ, "ಎಲ್ಲ ಅರ್ಹ ಫಲಾನುಭವಿಗಳಿಗೆ ಸಮಾನವಾಗಿ ನೆರವು ನೀಡಲಾಗುತ್ತಿದೆ. ಯಾವುದೇ ದೂರು ಬಂದರೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ," ಎಂದು ಹೇಳಿದರು.

### ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧವಿಲ್ಲ

ಮಹಿಳಾ ಮೀಸಲಾತಿ ವಿಷಯ ಕುರಿತು ಮಾತನಾಡಿದ ಸಿಎಂ ಸಿದ್ದರಾಮಯ್ಯ, ಮಹಿಳಾ ಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ವಿರೋಧದಲ್ಲಿಲ್ಲ, ಆದರೆ ಕ್ಷೇತ್ರ ಪುನರ್ವಿಂಗಡಣೆ (ಡಿಲಿಮಿಟೇಶನ್) ಜೊತೆ ಜೋಡಿಸುವುದಕ್ಕೆ ವಿರೋಧವಿದೆ ಎಂದು ಅವರು ಪುನರುಚ್ಚರಿಸಿದರು.

### ನಾನು ಮೂಢನಂಬಿಕೆಗಳನ್ನು ನಂಬುವುದಿಲ್ಲ :ಸಿಎಂ

ಚಾಮರಾಜನಗರ ಭೇಟಿ ಕುರಿತು ಮಾತನಾಡಿದ ಸಿಎಂ ಸಿದ್ದರಾಮಯ್ಯ, "ನಾನು ಮೂಢನಂಬಿಕೆಗಳನ್ನು ನಂಬುವುದಿಲ್ಲ. ಚಾಮರಾಜನಗರಕ್ಕೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ನಂಬಿಕೆ ತಪ್ಪು. ನಾನು ಹಲವಾರು ಬಾರಿ ಅಲ್ಲಿಗೆ ಭೇಟಿ ನೀಡಿದ್ದೇನೆ," ಎಂದು ಹೇಳಿದರು. ಇದೇ ವೇಳೆ ಹಿಂದಿನ ಹೇಳಿಕೆಯನ್ನು ಹಾಸ್ಯವಾಗಿ ಹೇಳಿದ್ದಾಗಿಯೂ ಸ್ಪಷ್ಟಪಡಿಸಿದರು.



## ಇಂಡಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ ಅಧಿಕಾರಿಗಳಿಗೆ ಖಡಕ್ ಸೂಚನೆ

# ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕಟ್ಟೆಚ್ಚರ ವಹಿಸಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಬೇಸಿಗೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗಿದೆ. ಇಂಡಿ ನಗರ ಸೇ-ರಿದಂತೆ ತಾಲೂಕಿನ ಯಾವದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕಟ್ಟೆಚ್ಚರ ವಹಿಸಬೇಕು ಮತ್ತು ತಾಲೂಕಿನ ಎಲ್ಲಾ ಕೆರೆಗಳಲ್ಲಿ ಶೇ 50 ರಷ್ಟು ನೀರು ಕಾಯ್ದುಕೊಳ್ಳಬೇಕು ಎಂದು ತಾಲೂಕಾ ಆಡಳಿತಕ್ಕೆ ಶಾಸಕ ಯಶವಂತರಾಯಗೌಡ ಪಾಟೀಲರು ಸೂಚಿಸಿದರು.




ಅವರು ಬುಧವಾರ ನಗರದ ತಾ.ಪಂ ಸಬಾಭವನದಲ್ಲಿ ಆಯೋಜಿಸಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಿನ ಮೈಲಾರ ಕೊಳುರಗಿ ಹಾಗೂ ಕೆಲವು ಅಡವಿ ವಸ್ತಿಗಳಲ್ಲಿ ಮಾತ್ರ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಅವುಗಳನ್ನು ತಕ್ಷಣವೇ ಬಗೆಹರಿಸಬೇಕು ಎಂದು ಸೂಚಿಸಿದರು.

ತಾಲೂಕಿನ 19 ಕೆರೆಗಳನ್ನು ತುಂಬಿಸುವ ಕೆಲಸ ಮಾಡಬೇಕು.ಅವುಗಳಲ್ಲಿ ಸಾಕಷ್ಟು ನೀರು ಇದೆಯೋ ಇಲ್ಲವೋ ಎನ್ನುವದನ್ನು ಸತತ ನಿಗಾವಹಿಸಬೇಕು. ನೀರು ಕಡಿಮೆಯಾದರೆ ತಕ್ಷಣವೇ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಲುವೆಯ ಮೂಲಕ ನೀರು ಹರಿಸಬೇಕು ಕೆರೆಗಳನ್ನು ತುಂಬಿಸುವ ವ್ಯವಸ್ಥೆ ಮಾಡಬೇಕೆಂದು ಕೃಷ್ಣಾ ಮೇಲ್ದಂಡೆ ಯೋಜನೆಯ ಅಧಿಕ್ಷಕ ಅಭಿಯಂತರ ಮನೋಜಕುಮಾರ ಗಡಬಳ್ಳಿ ಇವರಿಗೆ ತಿಳಿಸಿದರು. ಕಾಲುವೆಗೆ ನೀರು ಹರಿಯುವಾಗ ಮಧ್ಯದಲ್ಲಿ ನೀರು ಪೋಲಾಗದಂತೆ ನಿಗಾ ವಹಿಸಬೇಕು ಎಂದರು. ಕೇವಲ ಜನ ಮತ್ತು ಜಾನುವಾರುಗಳಿಗೆ ಕುಡಿಯುವದಕ್ಕಾಗಿ ನೀರು ಬಿಡಲಾಗಿದೆ ಎಂದು ಸಾರ್ವಜನಿಕರಿಗೆ ಮತ್ತು ರೈತರಿಗೆ ಮನವರಿಕೆ ಮಾಡಬೇಕೆಂದು ಸುಚನೆ ನೀಡಿದರು. ಈ ವ್ಯವಸ್ಥೆ ಜೂನ 15ರ ವರೆಗೆ ನಡೆಯಬೇಕೆಂದರು.

ಜಿಲ್ಲಾಧಿಕಾರಿ ಕೆ. ಆನಂದ ಮಾತನಾಡಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಯಾಗದಂತೆ ಕ್ರಮ ಜರುಗಿಸಲಾಗಿದೆ. ಎಲ್ಲಾ ಕೆರೆಗಳನ್ನು ತುಂಬಿಸಲಾಗಿದೆ.ಸಮಸ್ಯೆಯಾದರೆ ಮತ್ತೆ ಕೃಷ್ಣಾ ಕಾಲುವೆಯಿಂದ ನೀರು ಹ-ರಿಸಲಾಗುವದು ಎಂದರು.

ವೇದಿಕೆಯಲ್ಲಿ ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ಬಿ.ಎಸ್. ಕಡಕಬಾವಿ, ಇಒ ಭೀಮಾಶಂಕರ ಕನ್ನೂರ, ನಗರ ಯೋಜನಾಧಿಕಾರಿ ಸೌದಾಗರ ಇದ್ದರು.

ಸಭೆಯಲ್ಲಿ ನೀರಾವರಿ, ತೋಟಗಾ-ರಿಕೆ, ಕೃಷಿ, ಹೆಸ್ಕಾಂ, ನಗರಸಭೆ, ಪೊಲೀಸ್, ಕ್ಷೇತ್ರಶಿಕ್ಷಣಾಧಿಕಾರಿ, ಲೋಕೋಪಯೋಗಿ, ತಾಲೂಕಾ ಆರೋಗ್ಯ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

### ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಶಾಜಾದಬಿ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ತಾಲ್ಲೂಕಿನ ಬಾಬಾನಗರ ಗ್ರಾಮದ ಶಿಕ್ಷಕಿ ಶಾಜಾದಬಿ ಮಕಬೂಲಸಾಬ್ ನಗಾರಶಿ, ಸಿಂದಗಿ ತಾಲ್ಲೂಕಿನ ಆಲಮೇಲದ ಪಿಎಂಶ್ರೀ ಸರಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಅತ್ಯಂತ ಪ್ರಾಮಾಣಿಕ ಸೇವೆ ಸಲ್ಲಿಸಿರುವದನ್ನು ಗುರುತಿಸಿ ಕೋರವಾರ ಗ್ರಾಮದಲ್ಲಿ ಡಿಎಸ್ ( ಸಾಗರ ಬಣ )ನೇತೃತ್ವದಲ್ಲಿ ಸೋಮವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ ಅವರ 135 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕಿಯರು ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

### ಹೊರ್ತಿ ರೇವಣಸಿದ್ದೇಶ್ವರ ದೇಗುಲಕ್ಕೆ ರಾಜ್ಯಪಾಲರ ಭೇಟಿ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಸುಕ್ಷೇತ್ರ ಹೊರ್ತಿ ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನಕ್ಕೆ ಕರ್ನಾಟಕದ ರಾಜ್ಯಪಾಲ ಥಾವರ್ಚಂದ್ ಗೆಹ್ಲೋತ್ ಅವರು ಸೋಮವಾರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದ ಅವರು, ರಾಜ್ಯದ ಅಭಿವೃದ್ಧಿ ಮತ್ತು ಶಾಂತಿಗಾಗಿ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಅಣ್ಣಪ್ಪ ಸಾವಕಾರ ಖೈನೂರ ಹಾಗೂ ಇಂಡಿ ಡಿವೈಎಸ್ಪಿ ಸದಾಶಿವ ಕಟ್ಟಿಮನಿ



ಸೇರಿದಂತೆ ದೇವಸ್ಥಾನದ ಆಡಳಿತ ಮಂಡಳಿ ಇದ್ದರು.

### ಏ.24ರಂದು ಡಾ.ರಾಜ್ ಕುಮಾರ್ ಜನ್ಮದಿನಾಚರಣೆ ಹಾಗೂ ಗೀತ ಗಾಯನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ವರನಟ ಡಾ. ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಹಾಗೂ ಅವರ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮವನ್ನು ಇದೇ ಶುಕ್ರವಾರ, ಏಪ್ರಿಲ್.24ರ ಬೆಳಿಗ್ಗೆ 9 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಉದ್ಘಾಟಿಸುವರು. ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ರವಿಕುಮಾರ ಎನ್, ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ2 ಹಾಗೂ ಶಾಸಕರಾದ ಪ್ರಕಾಶ ಬಿ. ಹುಕ್ಕೇರಿ, ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ನಿಯಮಿತದ ಅಧ್ಯಕ್ಷರೂ ಆದ ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ, ಸಂಸದರಾದ ರಮೇಶ ಜಗಜಿಣಗಿ ಹಾಗೂ ಸುಧಾ ಮೂರ್ತಿ, ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಕಾಂತಾ ನಾಯ್ಕ, ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಬಿ.ಎಸ್.ಕವಲಗಿ, ಶಾಸಕರುಗಳಾದ ಯಶವಂತರಾಯಗೌಡ ಪಾಟೀಲ, ವಿಠ್ಠಲ ಕಟಕಧೋಂಡ, ರಾಜುಗೌಡ ಪಾಟೀಲ, ಅಶೋಕ ಮನಗೂಳಿ, ಹಣಮಂತ ನಿರಾಣಿ, ಸುನೀಲಗೌಡ ಪಾಟೀಲ, ಪಿ.ಎಚ್. ಪೂಜಾರ, ಕೇಶವ ಪ್ರಸಾದ ಎಸ್, ಮಹಾನಗರ ಪಾಲಿಕೆಯ ಮಹಾಪೌರರಾದ ಮಡಿವಾಳಪ್ಪ



ಕರಡಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಗಂಗಾಧರ ಎಸ್ ಸಂಬಣ್ಣಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಇಲಿಯಾಸ ಬೋರಾಮಣಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪತ್ರಕರ್ತರಾದ ಅಶೋಕ ಯಡಳ್ಳಿ ಹಾಗೂ ಪರಶುರಾಮ ಭಾಸಗಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಡಾ.ರಾಜ್ ಕುಮಾರ್ ಅಭಿನಯದ ಚಲನಚಿತ್ರ ಗೀತೆಗಳ ಗಾಯನ ಏರ್ಪಡಿಸಿದ್ದು, ಆಸಕ್ತರು ಪಾಲ್ಗೊಳ್ಳಬಹುದಾಗಿದೆ. ಪ್ರಸ್ತುತಪಡಿಸುವ ಹಾಡುಗಳ ಮಾಹಿತಿಯನ್ನು ಮೊ: 9049499783 ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

### ಶರಣರ ತತ್ವ ಸಿದ್ಧಾಂತಗಳು ಮೈಗೂಡಿಸಿಕೊಳ್ಳಿ :ಶಾಸಕ ಮನಗೂಳಿ

■ ಉದಯರಶ್ಮಿ ದಿನಪತ್ರಿಕೆ

ಮೋರಟಗಿ: ಸತ್ಯ ಶರಣರು, ಸಂತರು, ಪವಾಡ ಪುರುಷರು ನಡೆದಾಡಿದ ದೇಶ ನಮ್ಮದು ಯುವ ಪೀಳಿಗೆ ಸತ್ಪುರುಷರ, ಶರಣರ, ತತ್ವ ಸಿದ್ದಾಂತಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಗ್ರಾಮದಲ್ಲಿ ಸಮಗಾರ ಸಮುದಾಯದ ಬಾಂದವರು ಹಮ್ಮಿಕೊಂಡ ಶರಣ ಹರಳಯ್ಯನವರಜಯಂತೋತ್ಸವ ಕಾರ್ಯಕ್ರಮದಲ್ಲಿ ಗ್ರಾಮ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.



ಶರಣ ಹರಳಯ್ಯ ದಂಪತಿಗಳು ಬಸವಣ್ಣನವ-ರಿಗಾಗಿ ತಮ್ಮ ತೊಡೆಯ ಚರ್ಮ ಕೊಟ್ಟು ಪಾದುಕೆಗಳನ್ನು ತಯಾರಿಸಿ ಪಾವನರಾದರು. ಅವರ ಈ ತ್ಯಾಗವು ಕೇವಲ ಭಕ್ತಿ ಕಥೆಯಲ್ಲ, ಅದು ಸಮಾನತೆ ಮತ್ತು ಶರಣತತ್ವದ ಶಾಶ್ವತ ಸಂದೇಶ. ಬಸವಣ್ಣನವರು ಈ ಪಾದುಕೆಯನ್ನುಸ್ವೀಕರಿಸಿ,ಅದನ್ನು ಕೂಡಲಸಂಗಮದೇವರಿಗೇ ಅರ್ಪಿಸಿದ ಘಟನೆ ಇಂದಿಗೂ ಇತಿಹಾಸವಾಗಿ ಉಳಿದಿದೆ. ಇಂತಹ ಮಹಾ ಶರಣರ ಜಯಂತೋತ್ಸವಗಳು ಕೇವಲ ಒಂದು ದಿನಕ್ಕೆ ಸೀಮಿತವಾಗದೆ ಅವರ ಆಚಾರ ವಿಚಾರಗಳು ಪ್ರತಿ ನಿತ್ಯವೂ ನಮ್ಮ ಮಕ್ಕಳಿಗೆ ತಿಳಿಸುವ ಕಾರ್ಯವಾಗಬೇಕು. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮುಖ್ಯ ವಾಹಿನಿಗೆ ತರುವ ಕೆಲಸವಾಗಬೇಕು. ನಿಮ್ಮೊಂದಿಗೆ ನಾವಿದ್ದೇವೆ. ಸರಕಾರದ ಸವಲತ್ತಗಳನ್ನು ತಮ್ಮ ಸಮಾಜಕ್ಕೆ ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಬಿಳಿಯಾನಿಸಿದ್ದ ವಡೆಯರ್ ಸಾನಿಧ್ಯ ವಹಿಸಿದ್ದರು. ಮಾಜಿ ಜಿಪಂ ಸದಸ್ಯ ಎನ್ ಆರ್ ತಿವಾರಿ, ಮಾಜಿ ತಾಪಂ ಅಧ್ಯಕ್ಷ ಶಿವರಾಯ ಹಿಪ್ಪರಗಿ, ಪಿಕೆಪಿಎಸ್ ಅಧ್ಯಕ್ಷ ವೀರನಗೌಡ ಪಾಟೀಲ್, ಅಂಜುಮನ್ ಸಮೀತಿ ಕಾರ್ಯದರ್ಶಿ ಮೈಬೂಬಸಾಬ ಕಣ್ಣಿ, ಸೇರಿದಂತೆ ಗ್ರಾಪಂ ಮಾಜಿ ಸದಸ್ಯರು ಇದ್ದರು.

## ಕೆರೆಗೆ ಹೊಂದಿ ಕೊಳವೆಬಾವಿ ಕೊರೆಯಿಸಿ ಕಾನೂನು ಬಾಹಿರ ನೀರು ಮಾರಾಟ । ನೀರು ಮಾರಾಟ ಸ್ಥಳಕ್ಕೆ ಅಧಿಕಾರಿಗಳ ತಂಡ ದಾಳಿ । ನೀರು ಮಾರಾಟ ಮಾಡದಂತೆ ಮಾರಾಟಗಾರರಿಗೆ ತಹಸೀಲ್ದಾರ ಎಚ್ಚರಿಕೆ

# ಕಾನೂನು ಬಾಹಿರ ಟ್ಯಾಂಕರ್ ಮೂಲಕ ನೀರು ಮಾರಿದರೆ ಕ್ರಮ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ 23 ವಾರ್ಡಗಳಿಗೆ ನೀರು ಸರಬರಾಜು ಮಾಡುಲು ನಗರದಲ್ಲಿನ ಕೆರೆಗೆ ಕಾಲುವೆ ಮೂಲಕ ನೀರು ಸಂಗ್ರಹಿಸಲಾಗುತ್ತಿದೆ. ಆದರೆ ಕೆರೆಯ ಪಕ್ಕದಲ್ಲಿ ಕಾನೂನು ಬಾಹಿರವಾಗಿ ಬಾವಿ ಮತ್ತು ಕೊಳವೆ ಬಾವಿ ಕೊರೆದು ಅಕ್ರಮವಾಗಿ ನೀರು ಮಾರಾಟ ಮಾಡುತ್ತಿರುವ ಸ್ಥಳಕ್ಕೆ ಬುಧವಾರ ತಹಶೀಲ್ದಾರ ಕರೆಪ್ಪ ಬೆಳ್ಳಿ ಮತ್ತು ಪುರಸಭೆ ಅಭಿಯಂತರ ಅಜರ ನಾಟಿ-ಕಾರಿ ಜಂಟಿಯಾಗಿ ದಾಳಿ ನಡೆಸಿ ನೀರು ಮಾರಾಟ ಮಾಡುವುದನ್ನು ನಿಲ್ಲಿಸಬೇಕು. ಇಲ್ಲದ ಪಕ್ಷದಲ್ಲಿ ಟ್ಯಾಂಕರ್‌ಗಳನ್ನು ಸೀಜ್ ಮಾಡಲಾಗುತ್ತದೆ ಎಂದು ನೀರು ಮಾರಾಟಗಾರರಿಗೆ ಎಚ್ಚರಿಕೆ ನಿಡಿದ ಘಟನೆ ನಡೆದಿದೆ.

2011 ಅಡಿಯಲ್ಲಿ ವಾಣಿಜ್ಯ ಅಥವಾ ಟ್ಯಾಂಕರ್ ಮೂಲಕ ಅಂತರ್ಜಲ ಮಾರಾಟಕ್ಕೆ



ನಿರಾಕ್ಷೇಪಣಾ ಪತ್ರ ಕಡ್ಡಾಯ. ಆದರೆ ಸಿಂದಗಿ ನಗರದ ಕೆರೆಯ ಹತ್ತಿರ ಯಾವುದೇ ಅನುಮತಿ ಪಡೆಯದೇ ಟ್ಯಾಂಕರ್ ಮೂಲಕ ಕಾನೂನು ಬಾಯಿರ ನೀರು ಮಾರಾಟ ಮಾಡಬಾರದು ಎಂದು ಸಾಕಷ್ಟು ಬಾರಿ ಮೌಖಿಕವಾಗಿ ಸೂಚಿಸಿದರೂ ಅಧಿಕಾರಿಗಳ ಸೂಚನೆಗೆ ಬೆಲೆ ಕೊಡದೇ ಇರುವ ಹಿನ್ನಲೆಯಲ್ಲಿ ತಹಶೀಲ್ದಾರ ಹಾಗೂ ನಗರಸಭೆ ಅಧಿಕಾ-ರಿಗಳು ದಾಳಿ ನಡೆಸಿ ಕಾನೂನು ಬಾಹಿರ ನೀರು ಮಾರಾಟ ಮಾಡದಂತೆ ಎಚ್ಚರಿಸಿದ ಸಂದರ್ಭದಲ್ಲಿ ಅಧಿಕಾರಿಗಳ ಮತ್ತು ನೀರು ಮಾರಾಟ ಮಾಡುವರ ನಡುವೆ ಮಾತಿನ ವಾಗ್ವಾದ ನಡೆದಿದೆ.

ನಾವು ಕಳೆದ 15 ವರ್ಷಗಳಿಂದ ನೀರು ಮಾರಾಟ ಮಾಡುತ್ತಿದ್ದೇವೆ. ನಗರರಸಭೆ ಪೌರಾಯುಕ್ತರಿಗೆ, ಸದಸ್ಯರಿಗೂ ನೀರು ಹಾಕುತ್ತೇವೆ. ಮತ್ತು ಸರ್ಕಾರಿ ಹಾಸ್ಟೇಲ್‌ಗಳಿಗೆ ನೀರು ಮಾರಾಟ ಮಾಡುತ್ತೇವೆ. ನಮಗೆ ಯಾರೂ ಸೂಚನೆ ನೀಡಿಲ್ಲ ಎಂದು ನೀರು ಮಾರಾಟಗಾರರಾದ ರಾಜು ಕುಂಬಾರ, ರೇಣುಕಾ ಕುಂಬಾರ ಅಧಿಕಾರಿಗೆ ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ ಕರೆಪ್ಪ ಬೆಳ್ಳಿ ನೀರು ಮಾರಾಟಗಾರರಿಗೆ ಸೂಚನೆ ನೀಡಿ ಮಾತನಾಡಿ, ನಗರದಲ್ಲಿನ 23 ವಾರ್ಡಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಕೆರೆಯಲ್ಲಿ ನೀರು ಸಂಗ್ರಹಿಸಲಾಗುವುದು. ಕೆರೆಯ ಪಕ್ಕದಲ್ಲಿ ಬಾವಿ ತೋಡಿ, ಕೊಳೆಬಾವಿ ತೊಡಿ ನೀರು ಮಾರಾಟ ಮಾಡುವುದು ಮೊದಲನೆಯ ತಪ್ಪು. ಈಗಾಗಲೇ ಮೊದಲಿದ್ದ ತಹಶೀಲ್ದಾರರು, ನಗರಸಭೆ ಅಧಿಕಾರಿಗಳು ಕಾನೂನು ಬ್ಯಾಹಿರ ಟ್ಯಾಂಕರ್ ಮೂಲಕ ನೀರು ಮಾರಾಟ ಮಾಡಬಾರದು ಎಂದು ಎಚ್ಚರಿಕೆ ನೀಡಿದ್ದಾರೆ. ಈ ವರ್ಷ ಮುಂಗಾ-ರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್ ತಿಂಗಳಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟಂಬರ್ ತಿಂಗಳಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ. ಈ ಹಿನ್ನಲೆಯಲ್ಲಿ ಮುಂಬರುವ ದಿನಗಳಲ್ಲಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದು-ರಿಸುವಂತಾಗಬಾರದು ಎಂದು ಮುಂಜಾಗ್ರತ ವಹಿಸಲಾಗಿದೆ. ಅಕ್ರಮವಾಗಿ ನೀರನ್ನು ಮಾರಾಟ ಮಾಡುವ ಟ್ಯಾಂಕರ್‌ಗಳ ವಿರುದ್ಧ ಸಾರ್ವಜನಿಕರು ಅಧಿಕಾರಿಗಳಿಗೆ ದೂರು ನೀಡಬೇಕು. ಸರ್ಕಾರಿ ಜಲಮೂಲಗಳಿಗೆ ದಕ್ಕೆಯಾಗುವ ಕೊಳವೆಬಾವಿ ಕೊರೆದು ಅಕ್ರಮವಾಗಿ ಬಳಸಿ ನೀರು ಮಾರಾಟ ಮಾಡುವ ಖಾಸಗಿ ಟ್ಯಾಂಕರ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ.

ನಗರಸಭೆ ಅಭಿಯಂತರ ಅಜರ ನಾಟಿಕಾರ ಮಾತನಾಡಿ, ಈ ಬಾರಿ ಎಪ್ರಿಲ್-ಜೂನ್ ಅವಧಿಯಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡು ಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆಬಾರದಂತೆ ಮುಂಜಾಗರೂಕತಾ ಕ್ರಮಗಳನ್ನು ಕೈಕೊಳ್ಳಲಾಗಿದೆ. ಮಳೆಗಾಲ ವಿಳಂಬವಾಗಿ ಆರಂಭವಾಗುವ ಸಾಧ್ಯತೆಯಿರುವುದ-ರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಕೆರೆಯಲ್ಲಿ ನೀರಿನ ಸಂಗ್ರಹ ಕೊರತೆಯಾಗದಂತೆ ನಿರ್ವಹಣೆ ಮಾಡಲಾಗುತ್ತಿದೆ. ಕೆರೆಯ ಪಕ್ಕದಲ್ಲಿ ಬಾವಿ, ಕೊಳವೆ ಬಾವಿ ಕೊರೆದು ನೀರು ಮಾರಾಟ ಮಾಡುವುದು ಕಾನೂನು ಬಾಹಿರ. ಅಲ್ಲದೇ ನೀರು ಮಾರಾಟ ಮಾಡುವ ಯಾವ ಟ್ಯಾಂಕರ್ ಮೇಲೆ ರಜಿಸ್ಟರ್ ನಂಬರ ಇಲ್ಲ. ಆದ್ದರಿಂದ ಇನ್ನಾದರೂ ಕಾನೂನು ಬಾಹಿರ ನೀರು ಮಾರಾಟ ಮಾಡುವುದು ನಿಲ್ಲಿಸಬೇಕು. ಇಲ್ಲದ ಪಕ್ಷದಲ್ಲಿ ಶಿಸ್ತಿನ ಕ್ರಮ ಕೈಕೊಳ್ಳಲಾಗುವುದು ಎಂದು ಎಚ್ಚರಿಸಿದರು.

# ಕದಳಿವನ ವೇದಿಕೆಯ ಮೈದಾನದ ಕಟ್ಟಡಕ್ಕೆ ಶಕಾಪೂರ ಶ್ರೀಗಳಿಂದ ಭೂಮಿ ಪೂಜೆ



ಜೇವರ್ಗಿ, : ತಾಲ್ಲೂಕಿನ ಬಸವೇಶ್ವರ ನಗರದ ಕದಳಿವನ ವೇದಿಕೆ ವತಿಯಿಂದ ಬಸವ ಜಯಂತಿ ಪ್ರಯುಕ್ತ ಶಕಾಪುರ ತಪೋವನದ ಡಾ. ಸಿದ್ದರಾಮ ಶಿವಾಚಾರ್ಯರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಜರುಗಿತು. ಕಾರ್ಯಕ್ರಮವು ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭಗೊಂಡಿತು. ಡಾ. ಹಣಮಂತ್ರಾಯ ರಾಂಪುರೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಳಬೇಡ, ಕೊಲಬೇಡ" ಎಂಬ ಬಸವಣ್ಣನವರ ವಚನಗಳ ಒಳಾರ್ಥ ಮತ್ತು ಸಾರಾಂಶವನ್ನು ವಿವರಿಸಿದರು.

ನಂತರ ಕೃಷಿ ರತ್ನ ಡಾ. ಸಿದ್ದರಾಮ ಶಿವಾಚಾರ್ಯರು, ಸುಮಾರು ಹನ್ನೆರಡು ನೂರು ಭಕ್ತರನ್ನು ಒಳಗೊಂಡ ಒಂದು ವಾರದ ತೀರ್ಥಯಾತ್ರೆಯನ್ನು ಯಶಸ್ವಿಯಾಗಿ ನಡೆಸಿ, ಭಕ್ತರಲ್ಲಿ ಮಾನಸಿಕ ಮತ್ತು ದೈಹಿಕ ಬಲವನ್ನು ವೃದ್ಧಿಪಡಿಸಿದ ಹಿನ್ನೆಲೆಯಲ್ಲಿ, 893ನೇ ಬಸವ ಜಯಂತಿಯ ಅಂಗವಾಗಿ ಶಕಾಪುರ ಶ್ರೀಗಳನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಶ್ರೀಗಳು ತಮಿಳುನಾಡಿನ ವಿವಿಧ ತೀರ್ಥಕ್ಷೇತ್ರಗಳು, ಸಂಗಮಗಳು ಹಾಗೂ ಯಾತ್ರೆಯ ಅನುಭವಗಳನ್ನು ಹಂಚಿಕೊಂಡು ಭಕ್ತರಿಗೆ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಕದಳಿವನ ವೇದಿಕೆಯ ಮೈದಾನದಲ್ಲಿ ನಿರ್ಮಾಣವಾಗಲಿರುವ ಕಟ್ಟಡಕ್ಕೆ ಶಕಾಪುರ ಶ್ರೀಗಳು ಗುದ್ದಲಿ ಪೂಜೆ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಪತ್ರಕರ್ತ ಸುರೇಶಕುಮಾರ್ ಹಿರೇಮಠ ನಡೆಸಿದರು. ಯುವ ಹೋರಾಟಗಾರ ಸುರೇಶ್ ಪಾಟೀಲ್ ನೇದಲಗಿ ತೀರ್ಥಯಾತ್ರೆಯ ಕುರಿತು ವಿವರವಾಗಿ ಮಾತನಾಡಿ ವಂದನಾರ್ಪಣೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್.ಕೆ. ಬಿರಾದಾರ್, ಗೌರವ ಅಧ್ಯಕ್ಷ ಚನ್ನಮಲ್ಲಯ್ಯ ಹಿರೇಮಠ, ಗೌರವ ಕಾರ್ಯದರ್ಶಿ ಶ್ರೀಹರಿ ಕರಕಿಹಳ್ಳಿ, ದಲಿತ ಸಮಾಜದ ಮುಖಂಡ ಸಿದ್ದು ಕೆರೂರ್, ಸಂಘಟನಾ ಕಾರ್ಯದರ್ಶಿ ರಾಜಶೇಖರಯ್ಯ ಹಿರೇಮಠ, ಭಗವಂತರಾಯ ನಾರಾಯಣಪುರ ಸೇರಿದಂತೆ ಕದಳಿವನ ವೇದಿಕೆಯ ಅಧ್ಯಕ್ಷರು, ಸದಸ್ಯರು ಹಾಗೂ ಅನೇಕ ಬಸವಾಭಿಮಾನಿಗಳು ಉಪಸ್ಥಿತರಿದ್ದರು.

# ಬಸವಣ್ಣನವರು ಮನುಕುಲದ ಉದ್ದಾರಕರು, ಮಹಿಳಾವಾದಿ: ಮಲ್ಲಮ್ಮ ಕೊಬ್ಬಿನ್



ಜೇವರ್ಗಿ: ಬಸವಣ್ಣನವರು ಮನುಕುಲದ ಉದ್ಧಾರಕರು, ಮಹಿಳಾವಾದಿಯಾಗಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಮಲ್ಲಮ್ಮ ಕೊಬ್ಬಿನ್ ಅವರು ಹೇಳಿದರು.

ಪಟ್ಟಣದಲ್ಲಿ ಮಹಾ ಮಾನವತಾವಾದಿ ಬಸವಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಪ್ಪಟ

ಮಹಿಳಾವಾದಿಯಾಗಿದ್ದ ಬಸವಣ್ಣನವರು 12ನೇ ಶತಮಾನದಲ್ಲಿ ಮಹಿಳೆಯರಿಗೆ ಸಮಾನತೆ ನೀಡಿ ನ್ಯಾಯಯುತವಾಗಿ ಬದುಕಲು ಕಾಯಕವೇ ಕೈಲಾಸ ಎಂಬ ವಚನಗಳ ಮೂಲಕ ದುಡಿಯುವ ವರ್ಗಕ್ಕೆ ಧೈರ್ಯ ನೀಡಿದರು ಎಂದರು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯದರ್ಶಿ ರಾಜಶೇಖರ್ ಸೀರಿ, ಸಮಾಜ ಕಲ್ಯಾಣ ಅಧಿಕಾರಿ ಸತೀಶಕುಮಾರ್ ಸಂಗನ್, ಯುವ ಕಾಂಗ್ರೆಸ್ ಮುಖಂಡ ಭೀಮು ಖಾದ್ಯಾಪುರ ಮುಂತಾದವರು

# ಬಸವ ಜಯಂತಿ, ಏಕೋರಾಮಾಧ್ಯರ ಜಯಂತಿ ಆಚರಣೆ




ಕಲಬುರ್ಗಿ: ನಗರದ ಸಪ್ತ ನೇಕಾರ ಸೇವಾ ಸಂಘದ ಕಚೇರಿಯಲ್ಲಿ ಕೇದಾರ ಪೀಠದ ನೇಕಾರ ಕುಲಗುರು ಶ್ರೀ ಏಕೋರಾಮರಾಧ್ಯರ ಜಯಂತಿ ಹಾಗೂ 893ನೇ ಬಸವ ಜಯಂತಿಯನ್ನು ಏಕಕಾಲದಲ್ಲಿ ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ಮಹಾ ದಾರ್ಶನಿಕರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಬೆರಳಚ್ಚುಗಾರ ರಾಜಶೇಖರ್ ಮುಗಳಿ ಅವರು ಏಕೋರಾಮರಾಧ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಪಂಚ ಪೀಠಗಳಲ್ಲಿಯೇ ಅತಿ ಮುಖ್ಯವಾದ ಕೇದಾರ ಪೀಠದ ಮಹತ್ವವನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ. ಸಂಪ್ರದಾಯದ ಪ್ರಕಾರ ಇಷ್ಟಲಿಂಗ ಪೂಜೆ ಹಾಗೂ ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದ ಏಕೋರಾಮರಾಧ್ಯರ ತತ್ವಗಳು ನಮಗೆ ಮಾರ್ಗದರ್ಶಿಯಾಗಿವೆ ಎಂದು ತಿಳಿಸಿದರು.

ಸಮಾಜ ಸೇವಕ ಬಸವತಾರಾಯ ಕೊಳಕೂರ್ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ ಮಾತನಾಡಿ, 11ನೇ ಶತಮಾನದಲ್ಲಿ ಕನ್ನಡದ ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ವಚನ ಸಾಹಿತ್ಯದ ವಿಶ್ವ ವ್ಯಾಪಿ ಪ್ರಚಲಿತದಲ್ಲಿತ್ತು, ವಚನ ಸಾಹಿತ್ಯದಿಂದ ಹುಟ್ಟಿದ ಶರಣ ಧರ್ಮದ ಆಧಾರದ ಮೇಲೆ 12ನೇ ಶತಮಾನದಲ್ಲಿ ಬಸವಣ್ಣನವರು, ಪ್ರಜಾಪ್ರಭುತ್ವದ ಅಡಿಯಲ್ಲಿ ಏಕತೆ ತರಲು ಹೊಸ ಏಕೋಪಾಸನೆ ಪದ್ಧತಿ ಜಾರಿಗೆ ತಂದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ, ಅಲ್ಲದೇ ವಿಶ್ವಕ್ಕೆ ಹೊಸ ಸ್ವತಂತ್ರ ಕಲ್ಪನೆ ಮೇರೆಗೆ ಅನುಭವ ಮಂಟಪವನ್ನು ಸ್ಥಾಪಿಸಿದರು ಎಂದು ಹೇಳಿದರು.

ಸಂಘದ ಅಧ್ಯಕ್ಷರಾದ ಶಿವಲಿಂಗಪ್ಪ ಅಷ್ಟಗಿ ಅವರು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀನಿವಾಸ್ ಬಲಪುರ ಅವರು ಸ್ವಾಗತಿಸಿದರು. ಸಂಘದ ಸದಸ್ಯರು ಹಾಗೂ ಸಂಚಾಲಕರಾದ ನ್ಯಾಯವಾದಿ ಜೆನವೇರಿ ವಿನೋದಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಿಸಿ, ವಂದನಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಸಪ್ತ ನೇಕಾರ ಬಳಗದ ಕ್ರಿಯಾಶೀಲ ಸದಸ್ಯರು, ಛಾಯಾಗ್ರಾಹಕರ ರಾಜು ಕೋಷ್ಠಿ ಹಾಗೂ ವಿವಿಧ ಸಮುದಾಯಗಳ ಪ್ರಮುಖರು ಉಪಸ್ಥಿತರಿದ್ದರು.

## ಬಸವ ಜಯಂತಿ ಆಚರಣೆ

ಚನ್ನಮ್ಮನ ಕಿತ್ತೂರು: ಐತಿಹಾಸಿಕ ಚನ್ನಮ್ಮನ ಕೋಟೆ ಮುಂಭಾಗ ಅರಳಿಕಟ್ಟಿ ಸರ್ಕಲನಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣವರ 893ನೇ ಜಯಂತ್ಯೋತ್ಸವ ಅಂಗವಾಗಿ ಬಸವೇಶ್ವರ ಭಾವಚಿತ್ರಕ್ಕೆ ಧಾರವಾಡದ ಅಕ್ಕಮಹಾದೇವಿ ಪೀಠದ ಜ್ಞಾನೇಶ್ವರಿ ಮಾತಾಜಿ ಹಾಗೂ ಮಾತೆ ಚಂದ್ರಮ್ಮ, ಶಾಸಕ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ, ನಿಕಟಪೂರ್ವ ಬಿಜೆಪಿ ಮಂಡಳ ಅಧ್ಯಕ್ಷ ಡಾ. ಬಸವರಾಜ ಪರವಣ್ಣವರ, ಶರಣರ ಬಳಗ ಜೊತೆಗೂಡಿ ಜಾತಿ-ಭೇದ ಮರೆತು ರಾಜಕೀಯ ಹೊರಗಿಟ್ಟು ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

# ಮೇ.4ರಿಂದ ಶ್ರೀ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವ

■ ಉದಯರಶ್ಮಿ ದಿನಪತ್ರಿಕೆ




ಕೊಲ್ಹಾರ: ಪಟ್ಟಣದ ಶ್ರೀ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವವು ಮೇ 4ರಿಂದ ಭಕ್ತಿಭಾವ ಹಾಗೂ ವಿಜೃಂಭಣೆಯಿಂದ ನಡೆಯಲಿದೆ.

ಮೇ 4 ಸೋಮವಾರ ಮುಂಜಾನೆ 10 ಗಂಟೆಗೆ ಕೃಷಿ ಮೇಳ ಉದ್ಘಾಟನೆ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಅರವಟಿಗಿ ಬಸವೇಶ್ವರ ದೇವಸ್ಥಾನದಿಂದ ಹಂದರ ತಪ್ಪಲು ಮೆರವಣಿಗೆ ಮೂಲಕ ಆಗಮಿಸಿ ದೇವಸ್ಥಾನಕ್ಕೆ ಹಂದರ ತಪ್ಪಲು ಹಾಕುವ ಕಾರ್ಯಕ್ರಮ ಹಾಗೂ ಕಳಸಾರೋಹಣ ನೆರವೇರಿಸಲಾಗುವುದು.

ಮೇ 5 ಮಂಗಳವಾರ ಮುಂಜಾನೆ 5 ಗಂಟೆಗೆ ಹೋಮಹವನ ಕಾರ್ಯಕ್ರಮದಲ್ಲಿ ದಂಪತಿಗಳು ಭಾಗವಹಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಶ್ರೀ ದೇವಿ ಗಂಗಾ ಸ್ಥಳಕ್ಕೆ ತೆರಳಿ ಗಂಗಾ ಸ್ನಾನ ನಡೆಸಿ, ಪಟ್ಟಣದ ಪ್ರಮುಖ ರಸ್ತೆಯಲ್ಲಿ ವಿವಿಧ ಕಲಾ ತಂಡಗಳು ಭಾಗವಹಿಸಿ ಭವ್ಯ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಆಗಮಿಸಲಾಗುವುದು. ಮಧ್ಯಾಹ್ನ 3 ಗಂಟೆಗೆ ದೇವಿ ಆಗಮನ, ಸಂಜೆ 6 ಗಂಟೆಗೆ ಉತ್ತಮ ಶಿಕ್ಷಕರು, ಪ್ರತಿಭಾ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಧರ್ಮಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಮೇ 6 ಬುಧವಾರ ಮುಂಜಾನೆ 9 ಗಂಟೆಗೆ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮ ಹಾಗೂ ಮಹಿಳೆಯರ ಪಾತ್ರ ಕುರಿತು ವಿಚಾರಗೋಷ್ಠಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಕೃಷಿ ತಜ್ಞರು ಹಾಗೂ ಸಾಧಕ ರೈತ-ರಿಂದ ಕೃಷಿ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೇ. 7 ಗುರುವಾರ ಸಂಜೆ 4 ಗಂಟೆಗೆ ಹಂದರ ತಪ್ಪಲು ಇಳಿಯುವ ಮೂಲಕ ಜಾತ್ರಾ ಮಹೋತ್ಸವ ಮುಕ್ತಾಯಗೊಳ್ಳಲಿದೆ ಎಂದು ಶ್ರೀ ದ್ಯಾಮವ್ವ ದೇವಿ ಸೇವಾ ಸಮಿತಿಯವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ದ್ಯಾಮವ್ವ ದೇವಿ ಸೇವಾ ಸಮಿತಿ ಅಧ್ಯಕ್ಷ ಎಂ.ಎಸ್. ಬೆಳ್ಳುಬ್ಬಿ, ಕಾರ್ಯದರ್ಶಿ ಈರಯ್ಯ ಮಠಪತಿ, ಬಸಪ್ಪ ಬಾಟಿ, ಸಂಗಪ್ಪ ಪತಂಗಿ, ನಾಮದೇವ ಪವಾರ, ಚೆನ್ನಯ್ಯ ಗಣಕುಮಾರ, ಮಲ್ಲಪ್ಪ ಗಣಿ, ಸಂಗಪ್ಪ ತುಂಬರಮಟ್ಟಿ, ರಾಜು ತುಂಬರಮಟ್ಟಿ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

ಕೊಲ್ಹಾರ ತಾಲೂಕು ವ್ಯಾಪ್ತಿಯ ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 90ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮೇ 1ರೊಳಗೆ ಶಾಲಾ ದೃಢೀಕರಣ ಅಂಕಪಟ್ಟಿ, ಫೋಟೊ ಹಾಗೂ ಆಧಾರ್ ಕಾರ್ಡ್ ಪ್ರತಿಗಳನ್ನು ಅಗಸಿ ಸಮೀಪದ ಕೊಲ್ಹಾರ ವಿವಿಧೋದ್ದೇಶ ಸಹಕಾರಿ ಬ್ಯಾಂಕ್‌ಗೆ ಸಲ್ಲಿಸಬೇಕು.

# ಮೀಸಲಾತಿ ಜಾರಿ ಮಾಡಿಯೇ ತೀರುತ್ತೇವೆ: ಡಾ. ಸುಧಾ ಹಾಲ್ಕೈ

## ಮಹಿಳಾ ಮೀಸಲಾತಿ ವಿರೋಧಿಸಿದ ಕಾಂಗ್ರೆಸ್ ಅಪರಾಧಿ: ಶಾಸಕ ಮತ್ತಿಮೂಡ್ ಆಕ್ರೋಶ




ಕಲಬುರ್ಗಿ, : ನಾರಿ ಶಕ್ತಿ ವಂದನಾ ಅಧಿನಿಯಮದ ಮೂಲಕ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ನೀಡುವುದನ್ನು ಕಾಂಗ್ರೆಸ್ ವಿರೋಧಿಸುವ ಮೂಲಕ ಅಪರಾಧ ಮಾಡಿದೆ. ತನ್ನ ಮಹಿಳಾ ವಿರೋಧಿ ಮನಸ್ಥಿತಿಯನ್ನು ಬಹಿರಂಗಪಡಿಸಿದೆ ಎಂದು ಗ್ರಾಮೀಣ ಕ್ಷೇತ್ರದ ಶಾಸಕ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ಬಸವರಾಜ್ ಮತ್ತಿಮೂಡ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರನ್ನು ಸುಮಾರು 5-6 ದಶಕಗಳಿಂದ ಕೇವಲ ವೋಟ್ ಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್, ಈಗ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಗೆ ಅಡ್ಡಿಪಡಿಸಿದೆ. ಮಹಿಳಾ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ದೇಶದ ನಾರಿ ಶಕ್ತಿ ಮುಂಬರುವ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಮಹಿಳಾ ಮೀಸಲಾತಿಯನ್ನು ಕ್ಷೇತ್ರಗಳ ಪುನರ್ವಿಂಗಡನೆಯ ಮೂಲಕ ಜಾರಿಗೆ ತಂದಿದ್ದರೆ ಹೆಚ್ಚಿನ ಮಹಿಳೆಯರಿಗೆ ಮೀಸಲಾತಿ ಕ್ಷೇತ್ರಗಳು ಸಿಗುತ್ತಿದ್ದವು. ಹಾಗಾಗಿ ಕ್ಷೇತ್ರಗಳ ಪುನರ್ ವಿಂಗಡಣೆಯನ್ನೇ ವಿರೋಧಿಸಿ ಮಹಿಳಾ ಮೀಸಲಾತಿ ಜಾರಿಯಾಗದಂತೆ ಕಾಂಗ್ರೆಸ್ ಮಾಡಿದ್ದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಬಿಜೆಪಿ ವಕ್ತಾರೆ ಡಾ. ಸುಧಾ ಆರ್. ಹಾಲ್ಕೈ ಅವರು ಮಾತನಾಡಿ, ಸದ್ಯಕ್ಕೆ ಮಹಿಳಾ ಮೀಸಲಾತಿಯನ್ನು ತಡೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿರಬಹುದು. ವಿಳಂಬವಾದರೂ ಸರಿ ನರೇಂದ್ರ ಮೋದಿ ಅವರ ಸರ್ಕಾರ ಮಸೂದೆಯನ್ನು ಜಾರಿಗೆ ತರಲಿದೆ. ನರೇಂದ್ರ ಮೋದಿ ಅವರು ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡಲು ಮಾಡಿದ ಯಶಸ್ವಿ ಪ್ರಯತ್ನಕ್ಕೆ ಸೋಲಾಗಿದೆ. ಇದು ಮಹಿಳೆಯರಿಗೆ ಮಾಡಿದ ಅಪಮಾನವೇ ಹೊರತು ಇನ್ನೇನೂ ಅಲ್ಲ. ಮಹಿಳಾ ರಾಜಕೀಯ ಪ್ರಾತಿನಿಧ್ಯಕ್ಕೆ ಅವಕಾಶ ನೀಡಿದ್ದರೆ ಅದನ್ನು ಸುವರ್ಣಾಕ್ಷರದಲ್ಲಿ ಅ ಬರೆದಿಡಬಹುದಿತ್ತು. ಇದು ಕೇವಲ ಬಿಜೆಪಿ ಮತ್ತು ಮಿತ್ರಪಕ್ಷಗಳ ಪ್ರಯತ್ನವಲ್ಲ; ಎಲ್ಲ ಪಕ್ಷಗಳ ಪ್ರಯತ್ನ ಇದರ ಹಿಂದಿದೆ ಎಂದು ಬಿಂಬಿಸಬಹುದಿತ್ತು. ಆದರೆ, ನಿನ್ನೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಮಹಿಳಾ ವಿರೋಧಿ ಧೋರಣೆ ಅನಾವರಣಗೊಂಡಿದೆ ಎಂದು ಟೀಕಿಸಿದರು.

ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಅವರ ಮಿತ್ರ ಪಕ್ಷಗಳದು ಮಹಿಳೆಯರ ವಿಚಾರದಲ್ಲಿ ಕೇವಲ ಮೊಸಳೆಕಣ್ಣೀರು ಮಾತ್ರ ಅಭಿವೃದ್ಧಿಶೀಲ ರಾಷ್ಟ್ರದ ಪ್ರಯತ್ನದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯ ಚಿಂತನೆಗೆ ಧಕ್ಕೆ ತಂದಿದ್ದಾರೆ. ವಿಪಕ್ಷಗಳು ಮಹಿಳಾ ಮೀಸಲಾತಿಯನ್ನು ವಿರೋಧಿಸುತ್ತಿವೆ. ಪ್ರತಿಪಕ್ಷಗಳ ವಿರೋಧವು ಈ ಮಸೂದೆಯ ಅನುಷ್ಠಾನದ ವಿರುದ್ಧವಲ್ಲ, ಬದಲಾಗಿ ಮಹಿಳಾ ಮೀಸಲಾತಿಯ ವಿರುದ್ಧವಾಗಿದೆ. ಮೂರು ಮಸೂದೆಗಳ ಉದ್ದೇಶ ಮಹಿಳಾ ಸಬಲೀಕರಣ. ಒಬ್ಬ ಸಂಸದರು ಒಂದೇ ಕ್ಷೇತ್ರದಲ್ಲಿ ಸುಮಾರು 49 ಲಕ್ಷ ಮತದಾರರನ್ನು ಹೇಗೆ ಪ್ರತಿನಿಧಿಸಬಹುದು. ಪ್ರತಿಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯ ಕಾರ್ಯವಿಧಾನಕ್ಕಿಂತ ಹೆಚ್ಚಾಗಿ ಅದರ ವಿಷಯವನ್ನು ವಿರೋಧಿಸಿವೆ ಎಂದು ಅವರು ಟೀಕಿಸಿದರು.

ನರೇಂದ್ರ ಮೋದಿಯೇ ಅವರು ಮಹಿಳಾ ಸಶಕ್ತಿಕರಣ ಜಾರಿ ಮಾಡಿ 2009ರಲ್ಲಿ ಚುನಾವಣೆ ನಡೆಸುವುದು, ಒಬ್ಬ ವ್ಯಕ್ತಿ ಒಂದು ಮತ ಎಂದು ಸಿದ್ಧಾಂತವನ್ನು ದೃಢಗೊಳಿಸುವ ಚಿಂತನೆ ಹೊಂದಿದ್ದರು.ನಾರಿ ಶಕ್ತಿಗೆ 2029ಕ್ಕಿಂತ ಮೊದಲು ಅವಕಾಶ ಕೊಡಲು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಸಿದ್ಧವಿಲ್ಲ ಎಂಬುದು ಸಾಬೀತಾಗಿದೆ. ನರೇಂದ್ರ ಮೋದಿ ಅವರ ಅಭಿವೃದ್ಧಿ ಕಾರ್ಯಗಳಿಗೆ ವಿರೋಧ ಪಕ್ಷಗಳು ಸಹಕಾರ ನೀಡುತ್ತಿಲ್ಲ ಎಂದು ಅವರು ದೂರಿದರು.

ಕ್ಷೇತ್ರಗಳ ಮರುವಿಂಗಡಣೆಯ ಮೂಲಕವೇ ಮಹಿಳಾ ಮೀಸಲಾತಿ ಜಾರಿ ಮಾಡಿದರೆ ಮಾತ್ರ ಮಹಿಳೆಯರಿಗೆ ನ್ಯಾಯ ದೊರೆಯುತ್ತಿತ್ತು. ಅಂತಹ ಕೆಲಸವನ್ನು ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿದ ಪ್ರಯತ್ನವನ್ನು ವಿರೋಧ ಪಕ್ಷಗಳು ವಿಫಲಗೊಳಿಸಿವೆ ಎಂದು ಟೀಕಿಸಿದ ಅವರು, 2023ರ ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ಪಕ್ಷವು ಕೇವಲ ಶ್ರೀಮತಿ ಸೋನಿಯಾಗಾಂಧಿ, ಪ್ರಿಯಾಂಕಾ ವಾಡ್ರಾ ಹಾಗೂ ತಮ್ಮ ಕುಟುಂಬಸ್ಥರಿಗೆ ಮಾತ್ರ ಅನುಕೂಲವಾಗಲು ರೂಪಿಸಲಾಗಿದೆ. ಮೋದಿ ಅವರು ಇಂತಹ ಕುತಂತ್ರವನ್ನು ತಡೆಯಲು ಹೊಸ ಮಹಿಳಾ ಮೀಸಲಾತಿಯನ್ನು ಕ್ಷೇತ್ರಗಳ ಪುನರ್ ವಿಂಗಡಣೆಯ ಮೂಲಕ ಜಾರಿ ಮಾಡಲು ನಿರ್ಧರಿಸಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಿಳಾ ಬಿಜೆಪಿ ಘಟಕದ ಜಿಲ್ಲಾಧ್ಯಕ್ಷೆ ಶ್ರೀಮತಿ ಗೌರಿ ಚಿಚಕೋಟಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಶ್ರೀಮತಿ ಸುಶೀಲಾ, ಶ್ರೀಮತಿ ಭಾಗೀರಥಿ ಗುನ್ನಾಪೂರ್, ಜಗನ್ನಾಥ ಮಾಲಿಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# ಎನ್ ಎಸ್ ಎಸ್ ದಿಂದ ನಾಯಕತ್ವ ಗುಣ ಬೆಳವಣಿಗೆ: ಡಾ. ನಂದಗಾಂವ್

## ಶರಣಬಸವೇಶ್ವರ ಕಲಾ ಪದವಿ ಕಾಲೇಜಿನಲ್ಲಿ ಶಿಬಿರ ಆರಂಭ



ಕಲಬುರ್ಗಿ: ಎನ್‌ಎಸ್‌ಎಸ್ ಶಿಬಿರದಿಂದ ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆ, ನಾಯಕತ್ವ ಗುಣಗಳು, ಶಿಸ್ತು ಮತ್ತು ವ್ಯಕ್ತಿತ್ವ ವಿಕಸನವನ್ನು ಬೆಳೆಸಿಕೊಳ್ಳಲು ಸಾಧ್ಯ ಎಂದುಶರಣಬಸವೇಶ್ವರಕಲಾಪದವಿಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಸುರೇಶಕುಮಾರ್ ನಂದಗಾಂವ್ ಅವರು ಹೇಳಿದರು.

ಶರಣಬಸವೇಶ್ವರ ಕಲಾ ಪದವಿ ಮಹಾವಿದ್ಯಾಲಯ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ಇವರ ಸಹಯೋಗದಲ್ಲಿ ಮಂಗಳವಾದಿಂದ ಒಂದು ವಾರ ನಡೆಯುವ 2025-26ನೇ ಶೈಕ್ಷಣಿಕ ಸಾಲಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ನನಗಾಗಿ ಅಲ್ಲ ನಿಮಗಾಗಿ' ಎಂಬುವದು ಶಿಬಿರದ ಮುಖ್ಯ ಧ್ಯೇಯವಾಗಿದೆ. ಈ ಯೋಜನೆ ಮಹಾತ್ಮ ಗಾಂಧಿಜಿಯವರ ಕನಸ್ಸಿನ ಕೂಸು. ಸ್ವಚ್ಛತೆ, ಆರೋಗ್ಯ ಜಾಗೃತಿ, ಪರಿಸರ ಸಂರಕ್ಷಣೆ ಬಗ್ಗೆ ತಿಳಿಯುವುದು. ಗ್ರಾಮೀಣ ಜೀವನವನ್ನು ಅರಿತುಕೊಳ್ಳುವಿರಿ. ಶಿಬಿರದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಉಪಯೋಗ ಪಡೆಯಿರಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶಿಬಿರವನ್ನು ಸಂಸ್ಥೆಯ ಕು. ಪರಮೇಶ್ವರಿ ಪ್ರಭುರಾಜ್ ಅಪ್ಪ ಅವರು ಉದ್ಘಾಟಿಸಿದರು. ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಶರಣಗೌಡ ಪಾಟೀಲ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅನಿಲ್ ಭರಣಿ ಅವರು ಮಾತನಾಡಿದರು. ಮಹಾವಿದ್ಯಾಲಯದ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ವಿಜಯಲಕ್ಷ್ಮಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಸುವರ್ಣ ಅವರು ಕಾರ್ಯಕ್ರಮ ನಿರೂಪಿಸಿದರು. ಪ್ರಾಧ್ಯಾಪಕ ಡಾ. ಲಕ್ಷ್ಮಿಪುತ್ರ ಅವರು ವಂದಿಸಿದರು. ಸಹ ಸಂಯೋಜಕಿ ಪ್ರೊ. ಅನಿತಾ ಗೊಬ್ಬುರ್, ಡಾ. ಮಿಲಿಂದಕುಮಾರ್ ಸುಳ್ಳದ್, ಪ್ರಾಧ್ಯಾಪಕರಾದ ಡಾ.ಆರತಿ, ಡಾ. ಪಿಂಕ್ಯಾಯಿನಿ ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಸನಾತನ ಧರ್ಮ ಪುನರುಜ್ಜೀವನಕ್ಕೆ ಶಂಕರ-ರಾಮಾನುಜರ ಕೊಡುಗೆ ಅಪಾರ: ಡಾ. ಮೊಹರೀರ

ಕಲಬುರ್ಗಿ: ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ ಮಹಾನ್ ಆಚಾರ್ಯರಾದ ಶ್ರೀ ಆದಿ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರು ಅವರ ಕೊಡುಗೆ ಅಪಾರವೆಂದು ಸಂಸ್ಕೃತ ವಿದ್ವಾಂಸ ಡಾ. ಲಕ್ಷ್ಮಿಕಾಂತ್ ಮೊಹರೀರ ಅವರು ಹೇಳಿದರು.

ನಗರದ ಕರುಣೇಶ್ವರ ನಗರದ ಶ್ರೀ ಜೈ ವೀರ ಹನುಮಾನ್ ಮಂದಿರದಲ್ಲಿ ಆಯೋಜಿಸಿದ್ದ ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಶಂಕರ ಎಂದರೆ ಮಂಗಳ, ಆನಂದ ಮತ್ತು ಸಂತೋಷದ ಪ್ರತೀಕ. ಧರ್ಮವು ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಭಗವಂತನೇ ಶಂಕರಾಚಾರ್ಯರಾಗಿ ಅವತಾರಗೊಂಡು ಸನಾತನ ಧರ್ಮಕ್ಕೆ ಹೊಸ ಚೈತನ್ಯ ನೀಡಿದರು ಎಂದು ತಿಳಿಸಿದರು.

ಶಂಕರಾಚಾರ್ಯರು ತಮ್ಮ ತಾಯಿಯ ಅನುಮತಿ ಪಡೆದು ಸನ್ಯಾಸ ಸ್ವೀಕರಿಸಿ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶವ್ಯಾಪಿ ಯಾತ್ರೆ ಕೈಗೊಂಡರು. ದಶೋಪನಿಷತ್ತುಗಳು ಹಾಗೂ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಿ, ವೇದವ್ಯಾಸರ ಆಶೀರ್ವಾದ ಪಡೆದರು. ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ ಧರ್ಮಸ್ಥಾಪನೆಗೆ ಮಹತ್ವದ ಕೊಡುಗೆ ನೀಡಿದರು ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಭಜ ಗೋವಿಂದ ಸ್ತೋತ್ರದ ಅರ್ಥವನ್ನೂ ಅವರು ವಿಶ್ಲೇಷಿಸಿದರು.

ಇದೇ ವೇಳೆ ಶ್ರೀ ರಾಮಾನುಜಾಚಾರ್ಯರ ಜೀವನ ಚರಿತ್ರೆ, ಅವರ ಸಾಧನೆಗಳು ಮತ್ತು ಬೋಧನೆಗಳನ್ನು ಮನಮುಟ್ಟುವಂತೆ ವಿವರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಶಂಕರಾಚಾರ್ಯರ ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರಂತಹ ಮಹಾನ್ ಗುರುಗಳನ್ನು ಸ್ಮರಿಸುವುದು ನಮ್ಮ ಭಾಗ್ಯ ಎಂದು ತಿಳಿಸಿದರು.

# ರೈತ ಮುಖಂಡನ ಪುತ್ರ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ

■ ಉದಯರಶ್ಮಿ ದಿನಪತ್ರಿಕೆ



ಹೆಚ್ ಡಿ ಕೋಟೆ: ಶ್ರೀಮಂತರ ಮಕ್ಕಳು ಉತ್ತಮ ಅಂಕಗಳನ್ನು ಪಡೆಯುವುದರಲ್ಲಿ ಯಾವುದೇ ಆಶ್ಚರ್ಯ ಇರಲ್ಲ. ಆದರೆ ಒಬ್ಬ ರೈತನ ಮಗ/ಮಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದಾನೆ ಎಂದರೆ ಇಡೀ ಗ್ರಾಮಕ್ಕೆ ಗ್ರಾಮವೇ ಸಂಭ್ರಮಪಡುತ್ತೆ. ತಂದೆ-ತಾಯಿ ಮುಖದಲ್ಲಿ ಸಾರ್ಥಕ ಭಾವನೆ ಎದ್ದು ಕಾಣುತ್ತೆ. ಕೂಲಿ ಕೆಲಸ ಮಾಡಿ ಕಷ್ಟಪಟ್ಟು ಓದಿಸಿದಕ್ಕೂ ನನ್ನ ಮಗ ಊರಿಗೆ ಕೀರ್ತಿ ತಂದಿದ್ದಾನೆ, ಶಾಲೆಗೆ ಮಾದರಿಯಾಗಿದ್ದಾನೆ ಎಂಬ ಖುಷಿ ಇಮ್ಮಡಿಯಾಗುತ್ತೆ.

ಬಡತನದಲ್ಲೂ ಕಠಿಣ ಪರಿಶ್ರಮ, ಶ್ರದ್ದೆ, ನಿರಂತರ ಪ್ರಯತ್ನ, ಶಿಕ್ಷಕರ ಮಾರ್ಗದರ್ಶನದಿಂದ ಗ್ರಾಮೀಣ ಪ್ರತಿಭೆ ಹೇಮಂತ್ ಜಿ ಉತ್ತಮ ಸಾಧನೆ ಮಾಡಿದ್ದಾರೆ. ಹೆಚ್ ಡಿ ಕೋಟೆ ತಾಲೂಕಿನ ಗಂಗಡಹೊಸಳ್ಳಿ ಗ್ರಾಮದ ಗುರುಸ್ವಾಮಿ - ಶಿಲ್ಪಾ ದಂಪತಿಯ ಪುತ್ರ ಹೇಮಂತ್ ಜಿ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನೂ ಪಡೆದಿದ್ದಾರೆ. ಶ್ರೀರಂಗಪಟ್ಟಣ ಪಂಪ್ ಹೌಸ್ ನಲ್ಲಿರುವ ಆರಾಧನಾ ಪಿಯು ಕಾಲೇಜಿನಲ್ಲಿ ಓದುತ್ತಿದ್ದ ಹೇಮಂತ್ ಜಿ 532 ಅಂಕಗಳನ್ನು ಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ. ರೈತರ ಪರ ಹೋರಾಟ ಮಾಡುತ್ತಾ ಬರುತ್ತಿರುವ ಗುರುಸ್ವಾಮಿ ಅವರ ಪುತ್ರನ ಸಾಧನೆಗೆ ರೈತ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ವಿದ್ಯಾಭ್ಯಾಸಕ್ಕೆ ಒಳ್ಳೆಯದಾಗಲಿ ಎಂದು ಶುಭ ಹಾರೈಸುತ್ತಿದ್ದಾರೆ.

> "ಬಡತನವು ಸಾಧನೆಗೆ ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸಿ, ಅನೇಕ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿ ಮಾದರಿಯಾಗಿದ್ದಾರೆ. ಕೂಲಿ ಕಾರ್ಮಿಕರ ಮಕ್ಕಳು, ಸಣ್ಣ ರೈತರ ಮಕ್ಕಳು ತೀವ್ರ ಆರ್ಥಿಕ ಸಂಕಷ್ಟದ ನಡುವೆಯೂ, ದೃಢಸಂಕಲ್ಪ ಮತ್ತು ಕಠಿಣ ಪರಿಶ್ರಮದಿಂದ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಸಾಧನೆಗೈದಿದ್ದಾರೆ. ಆ ಸಾಲಿಗೆ ನನ್ನ ಮಗನು ಸೇರ್ಪಡೆಯಾಗಿರುವುದು ತುಂಬಾ ಸಂತೋಷದ ವಿಷಯ."
>
> ■ ಗುರುಸ್ವಾಮಿ
> ರೈತ ಮುಖಂಡರು

# ಜೇವರ್ಗಿಯಲ್ಲಿ ಬಸ್ ಹರಿದು ಕೂಲಿ ಕಾರ್ಮಿಕ ಮಹಿಳೆ ಸಾವು: 25 ಲಕ್ಷ ರೂ.ಗಳ ಪರಿಹಾರಕ್ಕೆ ಆಗ್ರಹ

ಕಲಬುರ್ಗಿ.: ಜೇವರ್ಗಿ ಪಟ್ಟಣದ ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿದ್ದ ಮಲ್ಲಮ್ಮ ಗಂಡ ಚಂದ್ರಕಾಂತ್ ಎಂಬ ಮಹಿಳೆಗೆ ಬಸ್ ಡಿಕ್ಕಿ ಹೊಡೆದು ಮೃತಪಟ್ಟಿದ್ದು, ಸಂತ್ರಸ್ತ ಕುಟುಂಬಕ್ಕೆ 25 ಲಕ್ಷ ರೂ.ಗಳ ಪರಿಹಾರ ಕೊಡಬೇಕು ಎಂದು ಜಾಗೃತಿ ಸಮಿತಿ ಸದಸ್ಯ ಹಾಗೂ ಸಫಾಯಿ ಕರ್ಮಚಾರಿ ಆಕಾಶ್ ಎಸ್. ಪಾರ್ಚಾ ಅವರು ಒತ್ತಾಯಿಸಿದರು. ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20ರಂದು ಬೆಳಗಿನ ಜಾವ 8 ಗಂಟೆಗೆ ಅಪಘಾತ ಸಂಭವಿಸಿ, ಮಹಿಳೆ ಸಾವನ್ನಪ್ಪಿದ್ದು, ಕೇವಲ 50,000ರೂ.ಗಳ ಪರಿಹಾರ ನೀಡಿ ಕೈತೊಳೆದುಕೊಳ್ಳಲಾಗಿದೆ ಎಂದರು.

# ನಾಗೂರದಲ್ಲಿ ಗದ್ದೆಮ್ಮದೇವಿ ಜಾತ್ರಾ ಮಹೋತ್ಸವ ಸಡಗರ

## ನೂರು ವರ್ಷಗಳ ಐತಿಹ್ಯ ಹೊಂದಿರುವ ಜಾತ್ರೆ। ಗದ್ದೆಮ್ಮ-ಲಕ್ಕಮ್ಮ ಅಕ್ಕ ತಂಗಿ ದೇವಿಗಳ ಸಮಾಗಮ। ಭವ್ಯ ಪಲ್ಲಕ್ಕಿ- ಕಳಸ ಮೆರವಣಿಗೆ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಗುಲಾಬಚಂದ ಜಾಧವ



ವಿಜಯಪುರ: ನೂರು ವರ್ಷಗಳ ಐತಿಹ್ಯ ಇತಿಹಾಸ ಹೊಂದಿರುವ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ನಾಗೂರ ಗ್ರಾಮದಲ್ಲಿ ಶ್ರೀ ಗದ್ದೆಮ್ಮದೇವಿ ಜಾತ್ರಾ ಮಹೋತ್ಸವ ಅತ್ಯಂತ ಸಡಗರ, ಸಂಭ್ರಮದಿಂದ ಜರುಗಿತು.

ಈ ಭಾಗದ ಭಕ್ತರ ಆರಾಧ್ಯದೇವಿಯಾಗಿ ಶ್ರದ್ಧಾಭಕ್ತಿಯಿಂದ ಪೂಜಿಸಲ್ಪಡುವ ಗದ್ದೆಮ್ಮದೇವಿ ಜಾಗೃತ ದೇವಿಯಾಗಿ ಭಕ್ತಗಣದ ಮನದಲ್ಲಿ ನೆಲೆಸಿದ್ದಾಳೆ. ಹೀಗಾಗಿ ಪ್ರತಿ ವರ್ಷವೂ ದೇವಿ ಜಾತ್ರೆ ಅದ್ದೂರಿಯಾಗಿ ನಡೆಯುತ್ತದೆ. ಗ್ರಾಮ ಸೇರಿದಂತೆ ವಿವಿಧೆಡೆಯಿಂದ ಜಾತ್ರಾ ಉತ್ಸವಕ್ಕೆ ಆಗಮಿಸಿದ ನೂರಾರು ಭಕ್ತ ಜನಸ್ತೋಮ ದೇವಿಯ ಆರಾಧನೆಯಲ್ಲಿ ದೈವತ್ವವನ್ನು ಕಂಡರು. ಭಕ್ತಿಪೂರಕ ನಮಿಸಿ ಹಲವರು ಧನ್ಯತೆ ಮೆರೆದರೆ ಇನ್ನೂ ಹರಿಕೆ ಹೊತ್ತ ಅನೇಕ ಜನತೆ ಭಕ್ತಿ ತರ್ಪಣದೊಂದಿಗೆ ದೇವಿಗೆ ವಿವಿಧ ಸೇವೆ ಸಮರ್ಪಿಸಿದರು. ಇಡೀ ನಾಗೂರ ಗ್ರಾಮ ಜಾತ್ರಾ ಹಬ್ಬದ ವೈವಿಧ್ಯಮಯ ವಿಶೇಷ ಸಾಮರಸ್ಯದ ವೈವಿಧ್ಯತೆಯಲ್ಲಿ ಮಿಂದೆದ್ದಿತು.

ನೂರು ವಸಂತಗಳ ಇತಿಹಾಸ ಲೇಪಿಸಿಕೊಂಡಿರುವ ಗದ್ದೆಮ್ಮದೇವಿ ಜಾತ್ರಾ ಕಳೆದ ಮೂರು ವರ್ಷಗಳ ಹಿಂದೆ ನಡೆಯುತ್ತಿದ್ದಾಗ ದೇವರ ಹೇಳಿಕೆಯೊಂದು ಕೇಳಿಬಂತು. ಆ ಹೇಳಿಕೆ ಭಕ್ತರ ಮನಾಂಗಳದಲ್ಲಿ ನಸುಳಿತು. ಆ ಹೇಳಿಕೆ ಏನೆಂದರೆ, ತಂಗಿ ಗದ್ದೆಮ್ಮದೇವಿ ಜಾತ್ರೆಯಲ್ಲಿ ಇದೇ ತಾಲೂಕಿನ ಇವಣಗಿಯ ಅಕ್ಕ ಶ್ರೀ ಲಕ್ಕಮ್ಮದೇವಿಯನ್ನು ತಂಗಿಯ ಜಾತ್ರೆಗೆ ಕರೆಸುವುದರ ಮೂಲಕ ಅಕ್ಕ-ತಂಗಿ ದೇವಿಯರನ್ನು ಒಂದೆಡೆ ಕೂರಿಸಿ ಅನನ್ಯ ಸಮಾಗಮದೊಂದಿಗೆ ಜಾತ್ರೆ ನೆರವೇರಿಸಬೇಕೆಂಬುದಾಗಿತ್ತು. ಆ ದೇವರ ಹೇಳಿಕೆಯಂತೆ ಜಾತ್ರಾ ಕಮೀಟಿ ಕಾರ್ಯಪ್ರವತ್ತವಾಗಿ ಈಗ ಪ್ರತಿ ವರ್ಷ ಈ ಅಕ್ಕ-ತಂಗಿ ದೇವಿಯರನ್ನು ಒಂದೆಡೆ ಸೇರಿಸಿ ಜಾತ್ರೆಗೆ ಚಾಲನೆ ನೀಡುತ್ತಿರುವುದು ವಿಶೇಷ.

ಭವ್ಯ ಪಲ್ಲಕ್ಕಿ-ಕಳಸ ಮೆರವಣಿಗೆ: ಗದ್ದೆಮ್ಮದೇವಿ ದೇಗುಲಕ್ಕೆ ಇವಣಗಿಯ ಶ್ರೀ ಲಕ್ಕಮ್ಮದೇವಿಯನ್ನು ಪಲ್ಲಕ್ಕಿಯಲ್ಲಿ ಹೊತ್ತು ಮೆರವಣಿಗೆ ಮೂಲಕ ಭಕ್ತರು ಹರ್ಷೋದ್ಗಾರದಿಂದ ಕರೆತರಲಾಯಿತು. ಇವಣಗಿಯ ಲಾಯಪ್ಪ ಪೂಜಾರಿ ಹಾಗೂ ನಾಗೂರಿನ ಶರಣಬಸು ಪೂಜಾರಿ ನೇತೃತ್ವದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯಗಳು ಜರುಗಿದವು. ಒಂದು ಪೂಜಾರಿ ಮುಂದಾಳತ್ವದ ತಂಡ ಗದ್ದೆಮ್ಮದೇವಿ ದೇಗುಲಕ್ಕೆ ಆಗಮಿಸಿ ಸಕಲ ಸಾಂಪ್ರದಾಯಿಕ ಪೂಜೆ ಸಲ್ಲಿಸಿತು.

ಯಲಗೂರಿನ ಕೃಷ್ಣಾ ನದಿಯ ನೀರನ್ನು ಕಮೀಟಿ ಸದಸ್ಯರಾದ ಶರಣಪ್ಪ ಮುಳವಾಡ ಹಾಗೂ ನೀಲಕಂಠ ಮರೋಳ ನೇತೃತ್ವದಲ್ಲಿ ಭಕ್ತರು ತೆರಳಿ ಕೃಷ್ಣೆ ಪವಿತ್ರ ಜಲ ತಂದು ಗದ್ದೆಮ್ಮದೇವಿ ಹಾಗೂ ಲಕ್ಕಮ್ಮದೇವಿ ಮೂರ್ತಿ,ಕಳಸ ಶುಚಿಗೊಳಿಸಿದರು.ಬಳಿಕ ದೇವಿಗಳಿಗೆ ಅಭಿಷೇಕ ಪೂಜೆಯ ನೆರವೇರಿತು.

ಗದ್ದೆಮ್ಮದೇವಿ ದೇವಿಯ ಕಳಸವನ್ನು ಕುಮಾರ ನಾಯ್ಕೋಡಿ ಹೊತ್ತಕೊಂಡು ಹಾಗೂ ಲಕ್ಕಮ್ಮದೇವಿಯ ಪಲ್ಲಕ್ಕಿಯನ್ನು ಹಣಮಂತ ವಾಲಿಕಾರ ನೇತೃತ್ವದಲ್ಲಿ ಬಸಯ್ಯ ಹಿರೇಮಠ, ಮಹೇಶ ಮರೋಳ, ಸಚಿನ ಹೆಬ್ಬಾಳ, ಮಾಂತು ಹೆಬ್ಬಾಳ ಇತರರು ದೇವಿಯ ಪಲ್ಲಕ್ಕಿ ಹೊತ್ತು ಗ್ರಾಮದಲ್ಲಿ ಮೆರವಣಿಗೆ ನಡೆಸಿದರು. ಪಾಲಕಿಯ ಪೂಜಾರಿಗಳನ್ನು ಒಳಗೊಂಡು ಭಕ್ತ ನಾರಿಲೋಕ ಕಳಸ ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ನೂರಾರು ಮುತ್ತೈದೆಯರು ಗಂಗ ಸ್ಥಳಕ್ಕೆ ತಲುಪಿದ ಬಳಿಕ ಗಂಗ ಸ್ಥಳದಲ್ಲಿ ಗದ್ದೆಮ್ಮದೇವಿ ಕಳಸ ಪವಿತ್ರಗೊಳಿಸಿ ಅಲ್ಲಿಯೂ ಪೂಜಿಸಲಾಯಿತು. ನಂತರ ಲಕ್ಕಮ್ಮದೇವಿಯ ಪಾಲಕಿಯನ್ನು ಹಣಮಂತ ದೇವಸ್ಥಾನದ ಮುಂದೆ ಇರಿಸಿ ಪೂಜಿಸಿದರು. ದೇವಿ ಪೂಜಾರಿಗಳು ವಸ್ತ್ರಾಭರಣ ಹೊಂದಿದ ಉಡುಗೆಯನ್ನು ದೇವಿಗೆ ಉಡಿಸಿ ನಾಗೂರಿನ ಅಗಸಿ ಮೂಲಕ ಶ್ರೀ ದ್ಯಾಮವ್ವದೇವಿಗೆ ಭೇಟಿ ಮಾಡಿಸಿದರು.ಬಳಿಕ ಮೆರವಣಿಗೆ ಮೂಲಕ ನಾಗೂರಿನ ಶ್ರೀ ಯಮನೂರೇಶ್ವರ ದೇವಾಲಯಕ್ಕೂ ಬೇಟಿ ನೀಡಿ ಪುನಃ ಗದ್ದೆಮ್ಮದೇವಿ ದೇಗುಲಕ್ಕೆ ದೇವತೆಗಳ ಪಲ್ಲಕ್ಕಿ ಕರೆತಂದರು. ಅಪಾರ ಭಕ್ತಗಣದ ಮದ್ಯೆ ಡೋಳ್ಳಿನ ನಿನಾದ ಝೇಂಕರಿಸಿತು. ಡೋಳ್ಳು ವಾದ್ಯಗಳ ನಾದಬಡಿತ ಗ್ರಾಮದಲ್ಲಿ ಮೊಳಗಿತು.

ದೇವರ ಹೇಳಿಕೆ: ದೇವರ ಹೇಳಿಕೆ ಆಲಿಸಲು ಭಕ್ತ ವೃಂದವು ತುದಿಗಾಲಿನಲ್ಲಿ ಏಕಚಿತ್ತವಾಗಿ ನಿಂತಿತು. ಮುಂಗಾರು ಮತ್ತು ಹಿಂಗಾರು ಮಳಿಯು ಉತ್ತಮವಾಗಲಿದೆ. ಕಾಳಿನ ಬಿತ್ತನೆ ಮಾಡಿದರೆ ಅಧಿಕ ಇಳುವರಿ ರೈತರು ಪಡೆಯುತ್ತಾರೆ ಎಂಬುದು ದೇವರ ಹೇಳಿಕೆ ಕರುಣಿಸಿತು.

ಜಾತ್ರಾ ಉತ್ಸವದಂಗವಾಗಿ ಭಕ್ತರಿಗೆ ಅನ್ನ ಪ್ರಸಾದ್ ವ್ಯವಸ್ಥೆ ಇತ್ತು. ಪ್ರಸಾದದ ಸಂಪೂರ್ಣ ವೆಚ್ಚವನ್ನು ಭಕ್ತಿ ಸೇವೆ ಮೂಲಕ ನಿಂಗಪ್ಪ ಮರೋಳ, ಶ್ರವಣಕುಮಾರ ಮರೋಳ, ಶ್ರೀಶೈಲ ಹೆಬ್ಬಾಳ ಭರಿಸಿ ಧನ್ಯತೆ ಮೆರೆದರು.

ಗ್ರಾಮದ ಹಿರಿಯರಾದ ಚಂದ್ರಶೇಖರ ಮರಳ, ಶುಚಿರುಚಿ ಅಡುಗೆ ಪ್ರಸಾದ್ ವ್ಯವಸ್ಥೆ ಮಾಡಿದರು.ಗಿರಿಮಲ್ಲ ಮರೋಳ, ಶಶೀಧರ ಹೆಬ್ಬಾಳ, ಕಿರಣಕುಮಾರ ಹೆಬ್ಬಾಳ, ಸತೀಶ ಮರೋಳ ನೇತೃತ್ವದಲ್ಲಿ ಭಕ್ತರಿಗೆ ಅಚ್ಚುಕಟ್ಟಾಗಿ ಪ್ರಸಾದ ವಿತರಿಸಿದರು.

**ದೇಸಾಯಿ ದರ್ಬಾರ ನಾಟಕ ಪ್ರದರ್ಶನ**: ಜಾತ್ರೆ ನಿಮಿತ್ಯ ರಾತ್ರಿ ದೇಸಾಯಿ ದರ್ಬಾರ ಅರ್ಥಾತ ಕಾರಕೂನ ಕಾರಬಾರ್ ನಾಟಕ ಪ್ರದರ್ಶನಗೊಂಡಿತು. ಹಲವು ಸಾಧಕರಿಗೆ ಜಾತ್ರೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಜಾತ್ರಾ ಕಮೀಟಿ ಅಧ್ಯಕ್ಷ ಶರಣಪ್ಪ ನಿಡಗುಂದಿ, ಸದಸ್ಯ ಶಿವಾನಂದ ನಾಯಿಕೋಡಿ, ಬಸವರಾಜ ಹೆಬ್ಬಾಳ, ಅಶೋಕ ಹೆಬ್ಬಾಳ ಸನ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು.

ಕಮೀಟಿ ಸದಸ್ಯರಾದ ಅಂಬ್ರಯ್ಯಾ ಹಿರೇಮಠ, ಗಿರೀಶ ಹೆಬ್ಬಾಳ, ಶಾಂತಪ್ಪ ನಾಯಿಕೋಡಿ, ಶಿವು ಮರೋಳ, ಪವನ ಮರೋಳ, ಅಮರ ನಿಡಗುಂದಿ ಇತರರು ಸೇರಿದಂತೆ ಗ್ರಾಮದ ಪ್ರಮುಖರು ಜಾತ್ರಾ ಮಹೋತ್ಸವ ಯಶಸ್ವಿಯಾಗಿ ವಿಜೃಂಭಣೆಯಿಂದ ನೆರವೇರಿಸಲು ಸಹಕರಿಸಿದರು.

# ಉದ್ಯೋಗದ ಬದುಕಿಗೆ ಬೇಕಿವೆ ಕೌಶಲ್ಯಗಳು




■ ಉದಯರಶ್ಮಿ ದಿನಪತ್ರಿಕೆ

**ಜಯ್ ನುಡಿ**

**(ವ್ಯಕ್ತಿತ್ವ ವಿಕಸನ ಕುರಿತ ಲೇಖನ ಮಾಲಿಕೆ)**

ಉದ್ಯೋಗ ಪ್ರಪಂಚವು ಇತ್ತೀಚಿಗೆ ಬಹು ವೇಗವಾಗಿ ಬದಲಾಗುತ್ತಿದೆ. ಹೊಸ ತಂತ್ರಜ್ಞಾನಗಳ ಏರಿಕೆ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಉದ್ಯೋಗ ಮಾರುಕಟ್ಟೆಯೊಂದಿಗೆ ಉದ್ಯೋಗದಲ್ಲಿ ಪ್ರಸ್ತುತ ಸ್ಪರ್ಧಾತ್ಮಕವಾಗಿರುವುದು ಎಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ. ಕೆಲಸದ ಸ್ಥಳವು ವಿಸಕಸನಗೊಳ್ಳುತ್ತಿದ್ದಂತೆ, ಭವಿಷ್ಯದಲ್ಲಿ ನಮ್ಮನ್ನು ಯಶಸ್ಸಿಗೆ ಕೊಂಡೊಯ್ಯುವ ಹೊಸ ಕೌಶಲ್ಯಗಳನ್ನು ಕಲಿಯುವುದು ಅನಿವಾರ್ಯವಾಗಿದೆ.

**ಕೌಶಲ್ಯ ಅಭಿವೃದ್ಧಿ**


ಪದವಿ ಗಳಿಸುವುದು ಮತ್ತು ಕೆಲಸ ಗಿಟ್ಟಿಸಿಕೊಳ್ಳುವುದು ಎಷ್ಟು ಮುಖ್ಯವೋ ಉದ್ಯೋಗದಲ್ಲಿ ಕೌಶಲ್ಯಗಳನ್ನು ಉತ್ತಮಪಡಿಸಿಕೊಳ್ಳುವುದು ಸಹ ಅಷ್ಟೇ ಮುಖ್ಯ. ವೃತ್ತಿಜೀವನವನ್ನು ಉತ್ತಮಪಡಿಸಿಕೊಳ್ಳಲು ಬಹುತೇಕ ಜನರು ಅನುಭವ ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವತ್ತ ಗಮನ ಹರಿಸುತ್ತಾರೆ. ಆದರೆ ಅಗತ್ಯ ಕೌಶಲ್ಯಗಳನ್ನು ವಿಶೇಷವಾಗಿ ಕೆಲಸದ ಸ್ಥಳ ಅಥವಾ ಮಾನವ ಕೌಶಲ್ಯಗಳನ್ನು ಉತ್ತಮಪಡಿಸಿಕೊಳ್ಳುವುದನ್ನು ನಿರ್ಲಕ್ಷಿಸುತ್ತಾರೆ. ಇದು ಉದ್ಯೋಗದಲ್ಲಿ ಹಿನ್ನಡೆಗೆ ಕಾರಣವಾಗುತ್ತದೆ. ಕೌಶಲ್ಯ ಅಭಿವೃದ್ಧಿಯು ನಾವು ಒಂದು ಕಾರ್ಯವನ್ನು ನಿರ್ವಹಿಸುವಾಗ ಹೆಚ್ಚು ಪರಿಣಾಮಕಾರಿಯಾಗಿರಲು ನಿರ್ದಿಷ್ಟ ಕೌಶಲ್ಯಗಳನ್ನು ಸುಧಾರಿಸುವ ಪ್ರಕ್ರಿಯೆ.

**ವೃತ್ತಿಯಲ್ಲಿನ ಬೆಳವಣಿಗೆ**

ಕೆಲಸದ ಸಂದರ್ಭದಲ್ಲಿ ಯಾವ ಕೌಶಲ್ಯಗಳು ಬೇಕಾಗುತ್ತವೆ ಅಥವಾ ಅವುಗಳನ್ನು ಹೇಗೆ ಪಡೆಯುವುದು ಎಂದು ತಿಳಿದುಕೊಳ್ಳುವುದು ಯಾವಾಗಲೂ ಸುಲಭವಲ್ಲ. ಉದ್ಯೋಗದಾತರು ನಿಮ್ಮ ಜ್ಞಾನವನ್ನು ಮಾತ್ರ ಹುಡುಕುತ್ತಿಲ್ಲ. ಆದರೆ ನೀವು ಒಬ್ಬ ವ್ಯಕ್ತಿಯಾಗಿ ಯಾರು ಮತ್ತು ಕೆಸಲದ ಸ್ಥಳಕ್ಕೆ ನೀವು ಹೇಗೆ ಕೊಡುಗೆ ನೀಡಬಹುದು ಎಂಬುದನ್ನು ತಿಳಿದುಕೊಳ್ಳುವುದು ಅವರಿಗೆ ಮುಖ್ಯವಾಗಿರುತ್ತದೆ. ನಿಮ್ಮ ಅಧ್ಯಯನದ ಜೊತೆಗೆ ನೀವು ಗಳಿಸಿದ ಅನುಭವಗಳು ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವಾಗ ವಿಶೇಷವಾಗಿ ಇತರ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸುವಾಗ ಅಮೂಲ್ಯವಾಗಬಹುದು. ಅವು ನಿಮ್ಮ ವಿಷಯ ಜ್ಞಾನವನ್ನು ಉಲ್ಲೇಖಿಸಲು ಮಾತ್ರವಲ್ಲದೆ ಇತರ ಗುಣಗಳು ಮತ್ತು ಕೌಶಲ್ಯಗಳನ್ನು ಎತ್ತಿ ತೋರಿಸಲು ನಿಮಗೆ ಅವಕಾಶವನ್ನು ನೀಡುತ್ತವೆ. ವೃತ್ತಿಯಲ್ಲಿನ ಉತ್ತಮ ಬೆಳವಣಿಗೆಗೆ ಈ ಕೌಶಲ್ಯಗಳನ್ನು ರೂಢಿಸಿಕೊಳ್ಳಿ.

ಸೇತುವೆ

2026 ರಲ್ಲಿ ಯಾವ ಕಠಿಣ ಮತ್ತು ಮೃದು ಕೌಶಲ್ಯಗಳು ಹೆಚ್ಚು



ಮುಖ್ಯವೆಂದು ನಿರ್ಧರಿಸಲು ವೃತ್ತಿ ಸೇವೆಗಳ ವೆಬ್‌ಸೈಟ್ ಇತ್ತೀಚಿಗೆ 1005 ಯು ಎಸ್ ನೇಮಕಾತಿ ವ್ಯವಸ್ಥಾಪಕರನ್ನು ಸಮೀಕ್ಷೆ ಮಾಡಿತು, ಇದು ಕಾರ್ಯಪಡೆಯ ಯೋಜನೆ ಮತ್ತು ಅಬಿವೃದ್ಧಿಯ ಮೇಲೆ ಪರಿಣಾಮ ಬೀರುವ ಆಶ್ಚರ್ಯಕರ ಆದ್ಯತೆಗಳನ್ನು ಬಹಿರಂಗಪಡಿಸಿತು. ಸಮೀಕ್ಷೆಯ ಪ್ರಕಾರ ಟಾಪ್ 10 ಕಠಿಣ ಕೌಶಲ್ಯಗಳು (ಅಂದರೆ, ಕೆಲಸಕ್ಕೆ ನೇರವಾಗಿ ಸಂಬಂಧಿಸಿದ ತಾಂತ್ರಿಕ, ಅಳೆಯಬಹುದಾದ ಸಾಮರ್ಥ್ಯಗಳು) ಟಾಪ್ 10 ಮೃದು ಕೌಶಲ್ಯಗಳು ಅಂದರೆ ( ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ರೂಪಿಸುವ ಪರಸ್ಪರ ಮತ್ತು ನಡವಳಿಕೆಯ ಸಾಮರ್ಥ್ಯಗಳು ಕೌಶಲ್ಯವು ಪ್ರತಿಭೆ ಮತ್ತು ಪ್ರತಿಫಲ ಅನುಭವದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ.

**ಎಐ**

ಎಐ ಜೊತೆಗೆ ಕೆಲಸ ಮಾಡುವ ಮತ್ತು ಸಹಯೋಗಿಸುವ ಕೆಲಸಗಾರರ ಸಾಮರ್ಥ್ಯವು ಹೆಚ್ಚು ಮುಖ್ಯವಾಗುತ್ತಿದೆ. ಸಮಸ್ಯೆ ಪರಿಹಾರ ಮತ್ತು ಕಾರ್ಯತಂತ್ರದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ವೃತ್ತಿಪರರು ವಿಶಿಷ್ಟ ಪ್ರಯೋಜನ ಹೊಂದಿರುತ್ತಾರೆ. ಎಐ ಅನ್ನು ಹೇಗೆ ಅನ್ವಯಿಸಬೇಕು ಮತ್ತು ಎಐ ಪರಿಸರ ವ್ಯವಸ್ಥೆಯೊಳಗೆ ಸೈಬರ್ ಬೆದರಿಕೆಗಳು ಮತ್ತು ಸುರಕ್ಷತೆಯನ್ನು ಸೂಕ್ತವಾಗಿ ನಿರ್ವಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವ ಪ್ರತಿಭೆಯನ್ನು ಸಂಸ್ಥೆಗಳು ಹುಡುಕುತ್ತಿವೆ.


ಪ್ರತಿಯೊಬ್ಬರಿಗೂ ತಮ್ಮ ಯದ್ಯೋಗದಲ್ಲಿ ಪ್ರಗತಿ ಕಾಣಬೇಕು, ದೊಡ್ಡ ಹುದ್ದೆಗೇರಬೇಕು ಎಂಬ ಕನಸು ಇರುವುದು ಸಹಜವೆ ಇದಕ್ಕೆ ಒಂದಷ್ಟು ಉತ್ತಮ ಗುಣ ಅಭ್ಯಾಸಗಳನ್ನು ರೂಡಿಸಿಕೊಳ್ಳುವುದು ಮುಖ್ಯ ಅಂತಹ ಕೆಲಸ ಕೌಶಲ್ಯಗಳು ಇಲ್ಲಿವೆ.

**ನಾಯಕತ್ವ**

ಎಲ್ಲರೂ ನಾಯಕತ್ವದ ಗುಣವನ್ನು ಬೆಳಿಸಿಕೊಳ್ಳಬೇಕು. ಈ ನಾಯಕತ್ವದ ಗುಣ ನಿಮ್ಮ ಅಭಿವೃದ್ಧಿಗೆ ಪೂರಕ. ಎಲ್ಲರನ್ನೂ ಸಮನಾಗಿ ಕಾಣುವ, ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು. ಕೆಲವೊಮ್ಮೆ ಪರಿಸ್ಥಿತಿಯನ್ನು ಬಹಳ ಎಚ್ಚರಿಕೆಯಿಂದ ನಿಭಾಯಿಸಬೇಕಾಗುತ್ತದೆ. ಯೋಚಿಸದೆ ದುಡುಕಿ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು. ದುಡುಕು ಗುಣ ಭವಿಷ್ಯದಲ್ಲಿ ತೊಂದರೆಗೀಡು ಮಾಡುವುದು ಖಂಡಿತ. ಇದರೊಂದಿಗೆ ವೃತ್ತಿಪರತೆ ಸಮಯ ನಿರ್ವಹಣೆ ಮತ್ತು ಹೊಣೆಗಾರಿಕೆಗಳನ್ನು ನಿಭಾಯಿಸುವುದು ಅಷ್ಟೇ ಮುಖ್ಯ.

**ಸಂವಹನ**

ನೀವು ಕೆಲಸದಲ್ಲಿ ಮಾನವ ಕೌಶಲ್ಯಗಳನ್ನು ಬಳಸಿಕೊಂಡು ಇತರರೊಂದಿಗೆ ಸಂವಹನ ನಡೆಸಲು ಸಶಕ್ತರಾದರೆ ಸಮಸ್ಯೆಗಳನ್ನು ಸ್ವತಂತ್ರವಾಗಿ ಪರಿಹರಿಸುತ್ತೀರಿ. ಇನ್ನು ಕೆಲವು ನಿಮಗೆ ಸ್ವಾಭಾವಿಕವಾಗಿ ಬರಬಹುದು. ಮತ್ತು ಕೆಲವನ್ನು ನೀವು ಉತ್ತಮಗೊಳಿಸುವ ಅಗತ್ಯ



ಇರಬಹುದು. ಸಾಮಾನ್ಯ ಮಾನವ ಕೌಶಲ್ಯಗಳಲ್ಲಿ ಪ್ರಮುಖವಾದುದು ಸಂವಹನ. ಸಂವಹನವು ಪ್ರಮುಖ ಮೃದು ಕೌಶಲ್ಯಗಳಲ್ಲೊಂದು. ಬಹುತೇಕ ಯಶಸ್ವಿ ನಾಯಕರು ಉತ್ತಮ ವಾಕ್ಚತುರ್ಯತೆಯನ್ನು ಹೊಂದಿರುತ್ತಾರೆ. ವಾಕ್ಚಾರ್ಯತೆ ಎಂದರೆ ಬರೀ ಭಾಷಣ ಮಾಡುವುದಲ್ಲ, ನಿಮ್ಮ ಆಲೋಚನೆ ಏನು, ಚಿಂತನೆಗಳು ಏನು ಎಂಬುದನ್ನು ಅರ್ಥ ಮಾಡಿಸುವ ಕೌಶಲ್ಯವೂ ಬೇಕು. ಈ ಕೌಶಲ್ಯವು ಉದ್ಯೋಗದಲ್ಲಿ ವಿವಿಧ ಸ್ತರಗಳಲ್ಲಿ ಸಹಾಯ ಮಾಡುತ್ತದೆ.

**ಡಿಜಿಟಲ್ ಸಾಕ್ಷರತೆ**

ಕೆಲಸದ ಸ್ಥಳದಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿರುವಂತೆ ಡಿಜಿಟಲ್ ಪರಿಕರಗಳು ಮತ್ತು ವೇದಿಕೆಗಳ ಬಗ್ಗೆ ಮೂಲಭೂತ ತಿಳುವಳಿಕೆಯನ್ನು ಹೊಂದಿರುವುದು ಮುಖ್ಯವಾಗಿದೆ. ಇದರಲ್ಲಿ ಮೈಕ್ರೋಸಾಫ್ಟ್ ಆಫೀಸ್‌ನಂತಹ ಕಾರ್ಯಕ್ರಮಗಳಲ್ಲಿ ಪ್ರಾವಿಣ್ಯತೆ ಜೊತೆಗೆ ಕ್ಲೌಡ್ ಕಂಪ್ಯೂಟಿಂಗ್, ಡೇಟಾ ವಿಶ್ಲೇಷಣ ಮತ್ತು ಸೈಬರ್ ಸುರಕ್ಷತೆಯ ಜ್ಞಾನವೂ ಸೇರಿದೆ.

**ಸೃಜನಶೀಲತೆ**

ಯಂತ್ರಗಳು ದಿನನಿತ್ಯದ ಕೆಲಸಗಳಲ್ಲಿ ಹೆಚ್ಚು ಪ್ರವೀಣನಾಗುತ್ತಿದ್ದಂತೆ, ಮಾನವ ಸೃಜನಶೀಲತೆ ಮತ್ತು ನಾವೀನ್ಯತೆ ಹೆಚ್ಚು ಮುಖ್ಯವಾಗುತ್ತದೆ. ನಿಮ್ಮ ಸೃಜನಶೀಲತೆ ಹೆಚ್ಚು ಪೆಟ್ಟಿಗೆಯ ಹೊರಗೆ ಯೋಚಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು. ನಿಮ್ಮ ಉದ್ಯೋಗದಲ್ಲಿ ಎದ್ದು ಕಾಣಲು ಮತ್ತು ಸಮಸ್ಯೆಗಳಿಗೆ ಹೊಸ ಪರಿಹಾರಗಳನ್ನು ಕಂಡು ಹಿಡಿಯಲು ಸಹಾಯ ಮಾಡುತ್ತದೆ.

**ಬುದ್ಧಿವಂತಿಕೆ**

ಭಾವನಾತ್ಮಕ ಬುದ್ಧಿವಂತಿಕೆ ಎಂದರೆ ನಿಮ್ಮ ಸ್ವಂತ ಭಾವನೆಗಳನ್ನು ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಮತ್ತು ನಿರ್ವಹಿಸುವ ಸಾಮರ್ಥ್ಯ ಕೆಲಸದ ಸ್ಥಳದಲ್ಲಿ ತಂಡಗಳು ಹೆಚ್ಚು ವೈವಿಧ್ಯಮಯ ಮತ್ತು ಅಂತರ್ಗತವಾಗುತ್ತಿದ್ದಂತೆ ಸಾಮರಸ್ಯ ಮತ್ತು ಸಹಯೋಗದ ಕೆಲಸದ ವಾತಾವರಣವನ್ನು ಉತ್ತೇಜಿಸಲು ಇದು ನಿರ್ಣಾಯಕ ಕೌಶಲ್ಯವಾಗಿದೆ.



ಆದ್ದರಿಂದ ಭಾವನಾತ್ಮಕ ಬುದ್ಧವಂತಿಕೆಯನ್ನು ಹರಿತಗೊಳಿಸುವ ಅವಶ್ಯಕತೆಯಿದೆ.

ಕೋರ್ಸ್‌ಗಳು

ಇಂದಿನ ಬದಲಾವಣೆಯ ವೇಗ, ಹೆಚ್ಚುತ್ತಿರುವ ಸ್ಪರ್ಧೆಯು ಕೌಶಲ್ಯದ ಗಮನವನ್ನು ಬಯಸುತ್ತದೆ. ಇದರೊಂದಿಗೆ ಕೆಲಸ ಮತ್ತು ಉದ್ಯೋಗಗಳು ವೇಗವಾಗಿ ಬದಲಾಗುತ್ತಿವೆ. ಮತ್ತು ಉದ್ಯೋಗಿಗಳು ಬೆಳವಣಿಗೆಗೆ ಅವಕಾಶಗಳನ್ನು ಬೆನ್ನಟ್ಟುತ್ತಿದ್ದಾರೆ. ಹೊಸ ಕೌಶಲ್ಯಗಳನ್ನು ಕಲಿಯಲು ಆನ್‌ಲೈನ್ ಕೋರ್ಸ್‌ಗಳು ಮತ್ತು ವೃತ್ತಿಪರ ಜೀವನದತ್ತ ಪಯಣದಲ್ಲಿ ನಿಮ್ಮನ್ನು ಬೆಂಬಲಿಸಲು ವಿನ್ಯಾಸಗೊಳಿಸಿದ ಕೋರ್ಸ್‌ಗಳನ್ನು ತೆಗೆದುಕೊಳ್ಳುವುದು. ಕಾರ್ಯಾಗಾರಗಳು ಮತ್ತು ಸಮ್ಮೇಳನಗಳಿಗೆ ಹಾಜರಾಗುವುದರಿಂದ ನಿಮ್ಮ ಕ್ಷೇತ್ರದ ಇತರರೊಂದಿಗೆ ಸಂಪರ್ಕ ಸಾಧಿಸುವ ಅವಕಾಶವನ್ನು ಒದಗಿಸುವುದು ಉತ್ತಮ.

ಕೊನೆ ಹನಿ

ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಮತ್ತು ಲೇಖನಗಳನ್ನು ಓದುವುದು ನಿಮಗೆ ವೃತ್ತಿಯಲ್ಲಿ ನವೀಕೃತವಾಗಿರಲು ನಿಮಗೆ ಸಹಾಯ ಮಾಡುತ್ತವೆ. ನೀವು ಕಲಿಯಲು ಬಯಸುವ ಕೌಶಲ್ಯಗಳಲ್ಲಿ ಪರಿಣತಿ ಹೊಂದಿರುವ ಮಾರ್ಗದರ್ಶಕರನ್ನು ಹುಡುಕುವುದು ಅವರ ಸಲಹೆಯನ್ನು ಪಡೆಯುವುದು. ಹೊಸ ಕೌಶಲ್ಯವನ್ನು ಕಲಿಯಲು ಸಮಯ ಮತ್ತು ಅಭ್ಯಾಸ ಬೇಕಾಗುತ್ತದೆ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಹೊಂದಲು ನೀವು ಸಿದ್ಧರಿದ್ದರೆ ವೃತ್ತಿ ಕೌಶಲ್ಯಗಳು ದಾರಿದೀಪವಾಗುತ್ತವೆ. ಉನ್ನತ ಬದುಕಿಗೆ ದಾರಿ ತೋರುತ್ತವೆ.



ಲೇಖನ
■ ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142





## ಆದಿ ಶಂಕರಾಚಾರ್ಯರ ಜಯಂತಿ ಭಕ್ತಿಭಾವದಿಂದ ಆಚರಣೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಬಳ್ಳೊಳ್ಳಿ ಗ್ರಾಮದ ನಾಡ ಕಚೇರಿಯಲ್ಲಿ ಶ್ರೀ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿಯನ್ನು ಭಕ್ತಿಭಾವದಿಂದ ಹಾಗೂ ಸರಳವಾಗಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ನಾಡ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸ್ಥಳೀಯರು ಸಾಕ್ಷಿಯಾದರು.

ಕಾರ್ಯಕ್ರಮದ ಅಂಗವಾಗಿ ಆದಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಉಪದೇಶಗಳು ಮತ್ತು ತತ್ವಗಳ ಮಹತ್ವವನ್ನು ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಬಳ್ಳೊಳ್ಳಿ ನಾಡ ಕಚೇರಿ ಉಪ ತಹಸೀಲ್ದಾರ್ ಆನಂದ ಪಮ್ಮಾರ, ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ಆಚರಿಸಲಾಗುವ ಆದಿ ಶಂಕರಾಚಾರ್ಯರ ಜಯಂತಿ ಅತ್ಯಂತ ಪವಿತ್ರ ದಿನವಾಗಿದ್ದು, ಅದ್ವೈತ ವೇದಾಂತದ ಮಹಾನ್ ಗುರುಗಳ ಜನ್ಮದಿನವಾಗಿದೆ ಎಂದು ಹೇಳಿದರು.

ಸಮಾಜದಲ್ಲಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬಲಪಡಿಸಲು ಇಂತಹ ಆಚರಣೆಗಳು ಅಗತ್ಯವೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎ ಎಂ.ಪಿ. ಕೊಡತೆ, ಗ್ರಾಮ ಆಡಳಿತಾಧಿಕಾರಿ ಶಂಕರ ಕಲಕೇರಿ, ಆಪರೇಟರ್ ಮಂಜುನಾಥ ಬನಸೋಡೆ, ಮಲ್ಲಿಕಾರ್ಜುನ ಭೋಸಗಿ ಸೇರಿದಂತೆ ಇತರ ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲರೂ ಆದಿ ಶಂಕರಾಚಾರ್ಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಸಂಕಲ್ಪ ಮಾಡಿದರು.

## ವಿದ್ಯಾರ್ಥಿಗಳ ಜೀವನ ಬಂಗಾರದ ಜೀವನ :ಕುರಂದವಾಡೆ

■ ಉದಯರಶ್ಮಿ ದಿನಪತ್ರಿಕೆ



ಬಬಲೇಶ್ವರ: ವಿದ್ಯಾರ್ಥಿ ಜೀವನ ಬಂಗಾರದಂತಹ ಜೀವನ, ಈ ಪುಣ್ಯ ನೆಲದ ಈ ಪ್ರೌಢ ಶಾಲೆಯಲ್ಲಿ ಕಲಿತ ಪ್ರತಿಯೊಬ್ಬರೂ ಉತ್ತಮ ಭವಿಷ್ಯ ಕಟ್ಟಿಕೊಂಡಿದ್ದಾರೆ ಎಂದು ವಿಶ್ರಾಂತ ಪ್ರಾಚಾರ್ಯ ಜೆ.ಜೆ. ಕುರಂದವಾಡೆ ಹೇಳಿದರು.

ಬಬಲೇಶ್ವರ ಪಟ್ಟಣದ ಶಾಂತವೀರ ಪ್ರೌಢ ಶಾಲೆ ಸೋಮವಾರ ನಡೆದ 1999-2000 ನೇ ಸಾಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶ್ರೀಲಕ್ಷ್ಮೀ ನರಸಯ್ಯ ರಾಜಶಾಸ್ತ್ರದ ವಿಶ್ರಾಂತ ಶಿಕ್ಷಕ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ತಾವು ಕಷ್ಟ ಪಟ್ಟು ಓದಿ ಈ ಹಂತಕ್ಕೆ ಬಂದಿದ್ದೀರಿ ನಾವು ನಿಮ್ಮೆಲ್ಲರ ಉತ್ತಮ ಸ್ಥಿತಿ ನೋಡಿ ತುಂಬಾ ಸಂತಸವಾಗಿದೆ ಎಂದರು.

ಹಿಂದಿ ವಿಷಯದ ವಿಶ್ರಾಂತ ಶಿಕ್ಷಕ ಎಸ್. ಡಿ. ಗಡದೆ ಮಾತನಾಡಿ, ಕಬೀರದಾಸ ಹಾಗೂ ತುಳಸಿದಾಸರ ದೋಹೆಗಳು ಅಂದಿಗೂ ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿವೆ ನಿಮ್ಮೆಲ್ಲರ ಜೀವನ ಇನ್ನೂ ಉತ್ತಮವಾಗಲಿ ಎಂದು ವಿದ್ಯಾರ್ಥಿಗಳಿಗೆ ಹಾರೈಸಿದರು.

ಸಾನಿಧ್ಯವಹಿಸಿದ ಬಬಲೇಶ್ವರ ಬ್ರಹನ್ಮಠದ ಮಹಾದೇವ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ರುದ್ರಗೌಡ ಬಿರಾದಾರ, ಸಂಸ್ಥೆಯ ಕಾರ್ಯದರ್ಶಿ ವಿ.ಎನ್ ಬಿರಾದಾರ,ವಿ.ಎಂ. ಬಿಳ್ಳೂರ, ಬಿ.ಎಸ್. ಅಳಗಿ, ಬಿ. ಡಿ. ತೆನಹಳ್ಳಿ, ವಿ. ಬಿ. ಮಠ, ಪಿ.ಎಸ್. ಗುಡ್ಡೇವಾಡಿ, ಎಸ್. ವಿ. ಬಿರಾದಾರ, ಎಂ. ಎಸ್. ತಮಂಡ, ಜಿ.ಕೆ.ಕೆಣಟಿ- ಜಜಜಿಟಿಜಜಟ್ಯಾಳ, ಎಸ್. ಆರ್. ನರೂಟಿ, ಐ. ಎಸ್. ಹುಂಡೇಕಾರ, ಎನ್. ಲಕ್ಷ್ಮಿ ನರಸಯ್ಯ, ಕೆ.ಕೆ. ಚಲವಾದೀ, ಎಸ್. ಡಿ.ಗಡದೆ ಇದ್ದರು. ಲಕ್ಷ್ಮಿ ಬಿರಾದಾರ ಪ್ರಾರ್ಥಿಸಿದರು, ಸಂಗಪ್ಪ ದಂದರಗಿ ಹಾಗೂ ಲಕ್ಷ್ಮಿ ನಾಗನೂರ ಸ್ವಾಗತಿಸಿದರು, ಬಸವರಾಜ ಪಾಟೀಲ್ ವಂದಿಸಿದರು. ಶ್ರೀಕಾಂತ್ ಬಿ. ಎಂ. ಕಾರ್ಯಕ್ರಮವನ್ನು ನಿರೂಪಿಸಿದರು.

## ನೆಮ್ಮದಿಗೆ ಅಂತರಂಗ-ಬಹಿರಂಗ ಶುದ್ಧಿ ಮುಖ್ಯ :ಶ್ರೀಶೈಲ ಜಗದ್ಗುರು



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ:ಧರ್ಮ ಪ್ರಚಾರ, ಸಾಮಾಜಿಕ ಸಾಮರಸ್ಯ ಮತ್ತು ಶಿಕ್ಷಣಕ್ಕೆ ಒತ್ತು ನೀಡುವ ಕನ್ನೊಳ್ಳಿ ಹಿರೇಮಠ ಜಾತಿ ಭೇದವಿಲ್ಲದೆ ಲಿಂಗದೀಕ್ಷೆ ನೀಡುವಂತಹ ಪ್ರಗತಿಪರ ಚಿಂತನೆಗಳಿಗೆ ಹೆಸರುವಾಸಿಯಾಗಿದೆ ಎಂದು ಶ್ರೀಶೈಲಂ ಪೀಠದ ಜಗದ್ಗುರು ಡಾ.ಚೆನ್ನಸಿದ್ದರಾಮ ಶಿವಾಚಾರ್ಯ ಭಗವತ್ಪಾದಂಗಳವರು ಹೇಳಿದರು.

ಸಿಂದಗಿ ತಾಲೂಕಿನ ಕನ್ನೊಳ್ಳಿ ಹಿರೇಮಠದಲ್ಲಿ ಜರುಗಿದ ಜಗದ್ಗುರು ಶ್ರೀ ದಾರುಕಾಚಾರ್ಯರ ನೂತನ ರಥೋತ್ಸವದ ಉದ್ಘಾಟನೆ ಹಾಗೂ ಲಿಂ.ಮರುಳಾರಾಧ್ಯ ಶಿವಾಚಾರ್ಯರ 112ನೆಯ ಜಯಂತ್ಯುತ್ಸವ ನಿಮಿತ್ಯ ಹಮ್ಮಿಕೊಂಡ ಶತಮಾನದ ಶಿವಯೋಗಿ ಮರುಳಾರಾಧ್ಯ ಶಿವಾಚಾರ್ಯರ ಮಹಾಪುರಾಣ ಜನಜಾಗೃತಿ ಧರ್ಮಸಭೆ ಪಾವನ ಸಾನಿಧ್ಯ ವಹಿಸಿ ಆಶೀರ್ವದಿಸಿ ಮಾತನಾಡಿ ಅವರು, ಜಾತಿ, ಮತ, ಪಂಥಗಳನ್ನು ಬದಿಗೊತ್ತಿ, ಎಲ್ಲರೂ ಒಂದಾಗಿ ಜಾತ್ರೆ ರಥೋತ್ಸವ ಎಳೆಯುವುದರಿಂದ ಭಾರತೀಯ ಸಂಸ್ಕೃತಿಯಲ್ಲಿನ ಮಾನವೀಯತೆಯ ಸಂಕೇತವಾಗಿದೆ.ಇಂತಹಆಚರಣೆಗಳುಸಮಾಜದಲ್ಲಿ ಶಾಂತಿ, ಸಹೋದರತ್ವ ಮತ್ತು ಅಂತರಂಗ ಮತ್ತು ಬಹಿರಂಗಗಳು ಒಂದೇ ಆಗಿರುವುದರಿಂದ ಒಗ್ಗಟ್ಟನ್ನು ಮೂಡಿಸುತ್ತವೆ. ಹೊರಗಿನ ರಥೋತ್ಸವಕ್ಕಿಂತ ನಮ್ಮ ಮನಸ್ಸು, ಶರೀರವನ್ನು ಭಕ್ತಿಯಿಂದ ಹದಗೊಳಿಸಿ ಗುರುವಿನ ಸನ್ಮಾರ್ಗದಲ್ಲಿ ನಡೆದಾಗ ಒಳಗಿರುವ ದೇವಾತ್ಮ ಸಾಕ್ಷಿಯಾಗಿ ಕಾಣುವುದೇ ನಿಜವಾದ ತೇರು. ಮನಸ್ಸು ಮತ್ತು ಆತ್ಮದ ಪಾವಿತೆಯನ್ನು ಎತ್ತಿ ಹಿಡಿದು ಆದ್ಯಾತ್ಮಿಕಯೆಡೆಗೆ ಹೆಚ್ಚು ಭಕ್ತರು ಗಮನ ಹರಿಸಿದಾಗ ನೆಮ್ಮದಿಗೆ ಅಂತರಂಗ ಮತ್ತು ಬಹಿರಂಗ ಶುದ್ಧವಾಗುತ್ತದೆ. ನಮ್ಮ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಜ್ಞಾನದ ಆಧಾರದ ಮೇಲೆ ಪಂಚೇಂದ್ರಿಗಳು ನಿರ್ವಹಿಸುತ್ತವೆ ಆದ್ದರಿದ ಆಧ್ಯಾತ್ಮ ಅರಿಯಲು ಪರಿಶುದ್ಧ ಮನಸ್ಸು ಬೇಕು ಎಂದರು .

ಈ ವೇಳೆ ಯರಡೋಣಿ ಗ್ರಾಮದ ಅಮರೇಶ ಶಾಸ್ತ್ರಿಗಳು ಪ್ರವಚನ ನೀಡಿದರು.

ಕನ್ನೊಳ್ಳಿ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿದರು. ದೇವರಹಿಪ್ಪರಗಿಯ ವೀರ ಮಾಹಾಂತ ಶಿವಾಚಾರ್ಯರಿಗೆ, ಕನ್ನೂರ ಸೋಮನಾಥ ಶಿವಾಚಾರ್ಯರಿಗೆ, ಯಂಕಂಚಿ ಹಿರೇಮಠದ ಅಭಿವನ ರುದ್ರಮುನಿ ಶಿವಾಚಾರ್ಯರಿಗೆ. ಹಾಗೂ ಭಕ್ತರಿಗೆ ಶ್ರೀಗಳು ಸನ್ಮಾನಿಸಿ ಗೌರವಿಸಿದರು. ಸಂಗೀತ ಶಿಕ್ಷಕ ರೇಣುಕ ಗವಾಯಿಗಳು ಕೆರುಟಗಿ, ಜೇವರ್ಗಿಯ ಮಹಾಂತೇಶ ಕಾಳಗಿ ಸಂಗೀತ ಸೇವೆ ಮಾಡಿದರು. ಪೂಜಾ ಹಿರೇಮಠ ನಿರೂಪಿಸಿದರು.

## ಮಣ್ಣಿನ ಆರೋಗ್ಯ ಕಾಪಾಡಲು ಸಾವಯವ ಕೃಷಿ ಅಗತ್ಯ :ಕನ್ನೇರಿ ಶ್ರೀ

■ ಉದಯರಶ್ಮಿ ದಿನಪತ್ರಿಕೆ




ಜಮಖಂಡಿ: ತಾಲೂಕಿನ ಚಿಕ್ಕಪಡಸಲಗಿ ಗ್ರಾಮದಲ್ಲಿ ಜೈ ಹನುಮಾನ ಯುವ ಮಿತ್ರ ಮಂಡಳಿಯವರ ನೇತೃತ್ವದಲ್ಲಿ ಪಾರಂಪರಿಕ ಕೃಷಿ ಪದ್ಧತಿ ಹಾಗೂ ಸಾವಯವ ಕೃಷಿ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಗ್ರಾಮೀಣ ರೈತರಿಗೆ ಉಪಯುಕ್ತ ಮಾಹಿತಿಯನ್ನು ಹಂಚುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಕನ್ನೇರಿ ಮಠದ ಸ್ವಾಮಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ರೈತರಿಗೆ ಮಾರ್ಗದರ್ಶನ ನೀಡಿದರು.

ಸ್ವಾಮಿಗಳು ತಮ್ಮ ಉಪನ್ಯಾಸದಲ್ಲಿ ಪಾರಂಪರಿಕ ಕೃಷಿ ವಿಧಾನಗಳ ಮಹತ್ವವನ್ನು ವಿವರವಾಗಿ ತಿಳಿಸಿದರು. ಇಂದಿನ ಕಾಲದಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯಿಂದ ಮಣ್ಣಿನ ಗುಣಮಟ್ಟ ಕುಸಿಯುತ್ತಿದ್ದು, ರೈತರು ಆರೋಗ್ಯ ಸಮಸ್ಯೆಗಳನ್ನೂ ಎದುರಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಸಾವಯವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದ್ದು, ಇದರಿಂದ ಮಣ್ಣಿನ ಆರೋಗ್ಯ ಕಾಪಾಡುವುದರ ಜೊತೆಗೆ ಉತ್ತಮ ಹಾಗೂ ಶುದ್ಧ ಬೆಳೆಯನ್ನು ಪಡೆಯಲು ಸಾಧ್ಯವೆಂದು ತಿಳಿಸಿದರು. ಇದರ ಜೊತೆಗೆ ಎಲ್‌ಪಿಜಿ ಗ್ಯಾಸ್ ಬಳಕೆಯಿಂದ ಉಂಟಾಗುವ ಕೆಲವು ಪರಿಸರ ಹಾಗೂ ಆರೋಗ್ಯ ಸಂಬಂಧಿತ ತೊಂದರೆಗಳ ಬಗ್ಗೆ ಕೂಡ ಜಾಗೃತಿ ಮೂಡಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಪರ್ಯಾಯವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕೆಂದು ಸಲಹೆ ನೀಡಿದರು. ರೈತರು ತಮ್ಮ ಹಳೆಯ ಪಾರಂಪರಿಕ ಜ್ಞಾನವನ್ನು ಮರುಜೀವಗೊಳಿಸಿ, ನೈಸರ್ಗಿಕ ಕೃಷಿಯತ್ತ ಗಮನ ಹರಿಸುವುದು ಇಂದಿನ ಅಗತ್ಯವೆಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಪೂಜ್ಯ ಮಾತೋಶ್ರೀ ಅಕ್ಕಮಹಾದೇವಿ ತಾಯಿಯವರು ಸಿದ್ಧಲಿಂಗೇಶ್ವರ ಕಮರಿಮಠದ ಆಶೀರ್ವಚನ ಕಾರ್ಯಕ್ರಮಕ್ಕೆ ವಿಶೇಷ ಆಧ್ಯಾತ್ಮಿಕ ಮೆರುಗು ನೀಡಿತು. ಅವರ ಆಶೀರ್ವಾದಗಳು ರೈತರಿಗೆ ಧೈರ್ಯ ಹಾಗೂ ಪ್ರೇರಣೆಯಾಗಿ ಪರಿಣಮಿಸಿತು.

ಕಾರ್ಯಕ್ರಮವನ್ನು ಶಿಕ್ಷಕ ಮಲ್ಲು ಪಟ್ಟಣಶೆಟ್ಟಿ ಅವರು ಸುಗಮವಾಗಿ ನಿರೂಪಿಸಿದರು. ಆರಂಭದಲ್ಲಿ ಶಿಕ್ಷಕ ಎಸ್. ಆರ್. ಪವಾರ ಅವರು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಶಿಕ್ಷಕ ಸುರೇಶ ಸಂತಿ ಅವರು ವಂದನಾರ್ಪಣೆ ಸಲ್ಲಿಸಿ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ರೈತರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉಪನ್ಯಾಸದ ಸದುಪಯೋಗ ಪಡೆದುಕೊಂಡರು. ಜೈ ಹನುಮಾನ ಯುವ ಮಿತ್ರ ಮಂಡಳಿಯ ಈ ಪ್ರಯತ್ನಕ್ಕೆ ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಯಿತು ಇಂತಹ ಜಾಗೃತಿ ಕಾರ್ಯಕ್ರಮಗಳು ಗ್ರಾಮೀಣ ಅಭಿವೃದ್ಧಿಗೆ ನೆರವಾಗಲಿವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದೆ ಸಂದರ್ಭದಲ್ಲಿ ಗ್ರಾಮಸ್ಥರಾದ ಪರಮಗೊಂಡ ದಾನಗೌಡ ಮಹಾದೇವ ಕಲ್ಯಾಣಿ ಗುಡುಸಾಬ ಹೊನವಾಡ ಶಿವರುದ್ರಯ್ಯ ಬಬಲಾದಿಮಠ ರುದ್ರಯ್ಯ ಹಿರೇಮಠ ಹನಮಂತ ನ್ಯಾಮಗೌಡ ಧರೆಪ್ಪ ದಾನಗೌಡ ಸೇರಿದಂತೆ ಚಿಕ್ಕಪಡಸಲಗಿ ಸುತ್ತಮುತ್ತಲಿನ ಗ್ರಾಮಗಳಾದ ಕವಟಗಿ ನಾಗನೂರ ಹಿರೇಪಡಸಲಗಿ ಆಲಗೂರ ಕುಂಚನೂರ ಸೇರಿಂದೆ ಅನೇಕ ಗ್ರಾಮದ ಸಾರ್ವಜನಿಕರು ಪಾಲ್ಗೊಂಡಿದ್ದರು.

## ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು, ಸದಸ್ಯರ ಜಿಲ್ಲಾ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಮೂರ್ತಿ ಎಲ್. ಸದಸ್ಯರಾದ ಎಂ.ಹುಂಬಯ್ಯ, ಸುನೀಲ್ ಎಂ ಉಕ್ಕಲಿ, ಎನ್.ದಿವಾಕರ್ ಮತ್ತು ಗೀತಾ ಥಾಂವಶಿ ಹಾಗೂ ಕಾರ್ಯದರ್ಶಿ ಡಾ. ಎಚ್.ಎಸ್. ಶಿವರಾಮು ಏ. 28 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಏ. 27 ರಂದು ಸಂಜೆ ಬೆಳಗಾವಿಯಿಂದ ವಿಜಯಪುರಕ್ಕೆ ಆಗಮಿಸುವರು. ಏ. 28 ರಂದು ಬೆಳಗ್ಗೆ 10.20 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗುವ ಸಭೆಯಲ್ಲಿ ಸರ್ಕಾರದ ಎಲ್ಲ ಇಲಾಖೆಗಳಿಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಾಂಗಕ್ಕೆ ಅನುದಾನ ವಿತರಣೆಯಾಗಿರುವ ಮತ್ತು ಜನರ ಕುಂದುಕೊರತೆಗಳ ಬಗ್ಗೆ ಪರಿಶೀಲಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಯಿಂದ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.

ಏ. 29 ರಂದು ವಿಜಯಪುರದಿಂದ ಕಲಬುರಗಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

ಈ ಸಭೆಯಲ್ಲಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿವಿಧ ಸಂಘಟನೆ ಮುಖಂಡರುಗಳು ಮತ್ತು ಸಂಘ ಸಂಸ್ಥೆ ಪದಾಧಿಕಾರಿಗಳು ಹಾಜರಾಗಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂಡಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಉದ್ಘಾಟಿಸಿದ ಶಾಸಕ ಯಶವಂತರಾಯಗೌಡ ಪಾಟೀಲ ಸಲಹೆ

## ಇಂಡಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಗರದ ಅಭಿವೃದ್ಧಿಯೇ ಗುರಿಯಾಗಲಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಇಂಡಿ ನಗರದ ಅಭಿವೃದ್ಧಿಗಾಗಿ ಕೆಲಸಮಾಡುವಸಂಸ್ಥೆ ಇಂಡಿನಗರಾಭಿವೃದ್ಧಿ ಪ್ರಾಧಿಕಾರ, ಅದರ ಪ್ರಯೋಜನ ಪಡೆದು ಕಾರ್ಯ ರೂಪಿಸಿ ಇಂಡಿ ನಗರ ಅಭಿವೃದ್ಧಿ ಪಡಿಸುವ ಗುರಿಯಾಗಬೇಕು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಅವರು ನಗರದ ಆಡಳಿತ ಸೌಧದ ಮೂರನೇಯ ಮಹಡಿಯಲ್ಲಿ ಇಂಡಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಉದ್ಘಾಟಿಸಿ ಮಾತನಾಡಿದರು.

ಇಂಡಿ ನಗರದ ಅಭಿವೃದ್ಧಿಗೆ ಇಂಡಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಇಂಡಿ ನಗರಸಭೆ ಕಾರ್ಯನಿರ್ವಹಿಸುತ್ತವೆ ಎಂದರು.

ಇಂಡಿ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಅಜೀತ ಧನಶೆಟ್ಟಿ ಮಾತನಾಡಿ, ನಗರಗಳ ವ್ಯವಸ್ಥಿತ ಬೆಳವಣಿಗೆಗೆ ಯೋಜನೆ ಸಿದ್ದಪಡಿಸುವದು ಮತ್ತು ಅನುಷ್ಠಾನಗೊಳಿಸುವದು ಉದ್ದೇಶವಾಗಿದೆ. ಅಭಿವೃದ್ಧಿ ಪಡಿಸಿದ ಪ್ರದೇಶಗಳಲ್ಲಿ ರಸ್ತೆ ನೀರು ಸರಬರಾಜು ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸುವದು ನಮ್ಮ ಗುರಿಯಾಗಿದೆ ಎಂದರು. ಇಂಡಿ ನಗರದ ವ್ಯವಸ್ಥಿತ ಅಭಿವೃದ್ಧಿ ವಸತಿ ಯೋಜನೆಗಳು ಮತ್ತು ಮೂಲಸೌಕರ್ಯ ಮಾಡುವ ಉದ್ದೇಶ ಹೊಂದಿದೆ. ಶಾಸಕರು ನಮ್ಮನ್ನು ಈ ಪ್ರಾಧಿಕಾರಕ್ಕೆನೇಮಕ ಮಾಡಲು ಶ್ರಮಿಸಿದ್ದು ಅವರ ಉದ್ದೇಶ ಈಡೇರಿಸುವ ಕಾರ್ಯ ನಾವೆಲ್ಲರೂ ಕೂಡಿ ಮಾಡುತ್ತೇವೆ. ನಗರದ ಅಭೀವೃದ್ಧಿಯ ದೃಷ್ಠಿಕೋನ ಒಂದೇ ನಮ್ಮ ಮುಂದಿರುವ ಗುರಿ ಎಂದರು.

ಇದೇ ವೇಳೆ ನೂತನ ಅಧ್ಯಕ್ಷರಾಗಿ ಅಜೀತ ಧನಶೆಟ್ಟಿ, ಸದಸ್ಯರಾಗಿ ಚನ್ನಪ್ಪ ಮಲ್ಲಪ್ಪ ಬೋಡಿ, ರವೀಂದ್ರ ನಿಗಡಿ, ದತ್ತಾತ್ರೇಯ ಜೋಶಿ ಅಧಿಕಾರ ಸ್ವೀಕರಿಸಿದರು.

ಜಿಲ್ಲಾಧಿಕಾರಿ ಕೆ.ಆನಂದ, ಪೌರಾಯುಕ್ತ ಶಿವಾನಂದ ಪೂಜಾರಿ, ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸೀಲ್ದಾರ ಬಿ.ಎಸ್.ಕಡಕಬಾವಿ, ಕೃಷಿ ಸಹಾಯಕ ನಿರ್ದೇಶಕ ಮಹಾದೇವಪ್ಪ ಏವೂರ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಇಲಿಯಾಸ ಬೋರಾಮಣಿ, ವಕೀಲರ ಸಂಘದ ಅಧ್ಯಕ್ಷ ಸಿದ್ದಣ್ಣ ಬೂದಿಹಾಳ, ಅಶೋಕ ಗಜಾಕೋಶ, ಸಂದೀಪ ಧನಶೆಟ್ಟಿ, ಶಾಂತುಗೌಡ ಬಿರಾದಾರ, ಶ್ರೀಕಾಂತ ಕುಡಿಗನೂರ, ಸತೀಶ ಕುಂಬಾರ ಮತ್ತಿತರರಿದ್ದರು.

ನೂತನ ಅಧಕ್ಷರಾಗಿ ಆಯ್ಕೆಯಾದ ಅಧ್ಯಕ್ಷ ಮತ್ತು ಸದಸ್ಯರನ್ನು ವಿವಿಧ ಸಂಸ್ಥೆಗಳು ಮತ್ತು ಗಣ್ಯರು ಸನ್ಮಾನಿಸಿದರು.

## ಗ್ರಾಪಂ ಸದಸ್ಯರ ಸ್ಥಾನ ಪ್ರಕಟಿಸಿದ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ವಿಜಯಪುರ ಜಿಲ್ಲೆಯ 13 ತಾಲೂಕಿನ ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನಗಳನ್ನು ಪ್ರಕರಣ 5(1) ರಡಿ ನಿಗದಿಪಡಿಸಿ ಪ್ರಕಟಿಸಿದೆ.

ಈ ವಿವರಗಳನ್ನು ಕರ್ನಾಟಕ ಪಂಚಾಯತ್ ರಾಜ್ ಸಿಮಾ Dre-Fob DAiÉÆÃUÀzÀ ªÉ¨ï ¸ÉÊmï: https://rdpr.karnataka.gov.in/rdc/public ಹಾಗೂ ದಿನಾಂಕ:18-4-2026ರ ಕರ್ನಾಟಕ ವಿಶೇಷ ರಾಜ್ ಪತ್ರದ ವಿಳಾಸ : https://erajyapatra.karnataka.gov.in ಪ್ರಕಟಿಸಲಾಗಿದೆ.

ಪ್ರಕಟಣೆಯಲ್ಲಿ ತಿಳಿಸಿರುವಂತೆ ಸಾರ್ವಜನಿಕ ಅಭಿಪ್ರಾಯ, ಅಕ್ಷೇಪಣೆಗಳನ್ನು ಆನ್ ಲೈನ್ ಮುಖಾಂತರ ಆಯೋಗದ ವೆಬ್‌ಸೈಟ್‌ನಲ್ಲಿ ಹಾಗೂ ಖುದ್ದಾಗಿ, ಅಂಚೆಯ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಇಲಾಖೆ ಗೇಟ್ ನಂ2, 2ನೇ ಮಹಡಿ ಕೊಠಡಿ ಸಂಖ್ಯೆ 229 ಮತ್ತು 230 ಬಹುಮಹಡಿಗಳ ಕಟ್ಟಡ ಬೆಂಗಳೂರನಲ್ಲಿ ಮಾತ್ರ ಏ. 24 ಒಳಗಾಗಿ ಸಲ್ಲಿಸಲು ಅವಕಾಶವಿದೆ.

ಕಾರಣ ಜಿಲ್ಲೆಯ ಎಲ್ಲ ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳು ತಪ್ಪದೇ ಈ ಅಧಿಸೂಚನೆಯನ್ನು ಪರಿಶೀಲಿಸಿ, ನಿಗದಿತ ಸಮಯದ ಒಳಗಾಗಿ ಕರ್ನಾಟಕ ಪಂಚಾಯತ್ ರಾಜ್ ಇಲಾಖೆ ಗೇಟ್ ನಂ2, 2ನೇ ಮಹಡಿ ಕೊಠಡಿ ಸಂಖ್ಯೆ 229 ಮತ್ತು 230 ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ನೇರವಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಪಡುವಲು ಶ್ರೀ ವಿರಕ್ತ ಮಠದ ಮಹದೇವಸ್ವಾಮಿಗಳ ಅಭಿಮತ

## ಭಗವಂತ ಮತ್ತು ಭಕ್ತನ ನಡುವೆ ಅರ್ಚಕರೇ ಸೇತುವೆ

■ ಉದಯರಶ್ಮಿ ದಿನಪತ್ರಿಕೆ



ಸರಗೂರು: ಭಗವಂತ ಮತ್ತು ಭಕ್ತನ ನಡುವೆ ಅರ್ಚಕರು ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಕ್ತರ ಆಶೋತ್ತರಗಳನ್ನ, ಬೇಡಿಕೆಗಳನ್ನ, ಅವರ ಮನದ ಇಚ್ಛೆಯನ್ನ, ತಮ್ಮ ಭಕ್ತಿಯ ಮೂಲಕವಾಗಿ ಭಗವಂತನಿಗೆ ಅರ್ಪಿಸುವ ಕಾರ್ಯವನ್ನು ಅರ್ಚಕರು ಮಾಡುತ್ತಿದ್ದಾರೆ ಎಂದು ಪಡುವಲು ಶ್ರೀ ವಿರಕ್ತ ಮಠದ ಅಧ್ಯಕ್ಷರಾದ ಶ್ರೀ ಮಹದೇವಸ್ವಾಮಿಗಳು ಹೇಳಿದರು.

ಪಟ್ಟಣದ ಸೌಜನ್ಯ ಗ್ಯಾಸ್ ಫ್ಯಾಕ್ಟರಿ ಸಮೀಪ ಸಂಘದ ನಿವೇಶನದಲ್ಲಿ ಹಮ್ಮಿಕೊಂಡಿದ್ದ ಶೈವಾಗಮ ರೀತ್ಯಾ ಅರ್ಚಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲಿ ಮಕ್ಕಳು ಮೊಬೈಲ್ ಗೆ ಜೋತುಬಿದ್ದು, ಆಚಾರ-ವಿಚಾರಗಳನ್ನು ಮರೆಯುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಶಿವಾರ್ಚಕರ ಸಂಘ, ಮಕ್ಕಳಿಗೆ ಸನಾತನ ಧರ್ಮದ ಸಂಸ್ಕಾರ, ಸಂಸ್ಕೃತಿ, ಪೂಜಾ ವಿಧಿ-ವಿಧಾನ ಹೇಳಿಕೊಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಮಹದೇವಸ್ವಾಮಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಗಾವಡಗೆರೆಯ ಗುರುಲಿಂಗ ಜಂಗಮದೇವರ ಮಠಾಧ್ಯಕ್ಷ ನಟರಾಜುಸ್ವಾಮಿ ಮಾತನಾಡಿ, ದೇಶಕ್ಕೆ ದೊಡ್ಡಣ್ಣ ಎನಿಸಿಕೊಳ್ಳುವ ಅಮೇರಿಕಾದಲ್ಲಿ ಸಂಪತ್ತು ಇದೆ. ಆದರೆ ಸಂತೋಷ, ಪ್ರೀತಿ, ಅಭಿಮಾನ ಇಲ್ಲ. ದೇಶ-ದೇಶಗಳ ನಡುವೆ ಹೊತ್ತಿ ಉರಿಯುತ್ತಿರುವ ಈ ಮಧ್ಯೆ ಭಾರತ ದೇಶದ ಭವ್ಯತೆ ತನ್ನದೇ ಆದ ಸಂಬಂಧವನ್ನು ಕಟ್ಟಿಕೊಂಡಿದೆ. ಆ ಸಂಬಂಧಕ್ಕೆ ಮೂಲ ಸಂಸ್ಕಾರ ಅಂದ್ರೆ ಪೂಜಾ ಸಂಸ್ಕಾರದ ಪರಂಪರೆ. ಸಂಪತ್ತು ಒಂದು ಸುಖದ ಸೋಪಾನವೇ ಹೊರತು ಸಂಪತ್ತೇ ಸುಖವಲ್ಲ. ಸುಖದ ಸೋಪಾನವನ್ನ ಗಟ್ಟಿಗೊಳಿಸುವ ಕಾರ್ಯ ಮಂಗಳಕರವಾಗಿರಲು ಪೂಜೆ ಅತಿ ಮುಖ್ಯ. ಆ ಕೆಲಸವನ್ನು ಶಿವಾರ್ಚಕರ ಸಂಘ ಮಾಡುತ್ತಾ ಬರುತ್ತಿದೆ. ವರ್ಷದಿಂದ ವರ್ಷಕ್ಕೆ ಶಿಬಿರ ಹೆಮ್ಮರವಾಗಿ ಬೆಳೆಯುತ್ತಿದೆ ಎಂದು ಹೇಳಿದರು. ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಅಧ್ಯಕ್ಷ ಡಾ. ವಿದ್ವಾನ್ ಮಲ್ಲಣ್ಣ ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಣ್ಯರನ್ನು ಹಾಗೂ ವಿವಿಧ ದೇವಸ್ಥಾನಗಳ ಅರ್ಚಕರನ್ನು ಸನ್ಮಾನಿಸಿ, ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು.

ಈ ವೇಳೆ ದಡದಹಳ್ಳಿ ಮಠಾಧ್ಯಕ್ಷ ಷಡಕ್ಷರಿ ಸ್ವಾಮಿಗಳು, ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾದ ಡಾ. ಮಹದೇವಸ್ವಾಮಿರವರು, ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಅಧ್ಯಕ್ಷ ಡಾ. ವಿದ್ವಾನ್ ಮಲ್ಲಣ್ಣ, ಮೈಸೂರು ಜಿಲ್ಲಾಧಿಕಾರಿ ಕಛೇರಿಯ ಧಾರ್ಮಿಕ ದತ್ತಿಯ ತಹಶೀಲ್ದಾರ್ ಭಾಗ್ಯ, ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಬೋಳಪ್ಪ ಗುರೂಜಿ, ಡಾ. ಭಜರಂಗಿ ಉಮೇಶ್ , ನಂಜುಂಡಸ್ವಾಮಿ, ಜೈನ ಸಮಾಜದ ಅಧ್ಯಕ್ಷ ನಾಗರಾಜು, ಶ್ರೀ ಚಿಕ್ಕದೇವಮ್ಮ ಬೆಟ್ಟದ ಪಾರುಪತ್ತೆದಾರ ಶಾಂತಿಪುರ ಮಹದೇವಸ್ವಾಮಿ ಸೇರಿದಂತೆ ಹಲವರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR